ಕೊರವಂಜಿ

Koravanji



ಫೆಬ್ರವರಿ
೧೯೫೫

★

ಸಂಪಾದಕರು :
ಶ್ರೀ|| ರಾ. ಶಿ.

ಬರಹಗಾರರು :

ಶ್ರೀಮತಿ|| ಲೀಲಾ
ಶ್ರೀ|| ಅ. ರಾ. ಸೇ.
ಶ್ರೀ|| ರಾಮಕೃಷ್ಣ
ಶ್ರೀ|| "ಕೇಫ"
ಶ್ರೀ|| ಬಿ. ಎನ್. ಮೂರ್ತಿ
ಶ್ರೀ|| ಪಾಟಾಳಿ
ಶ್ರೀಮತಿ|| ಹೆಚ್. ಎನ್. ರತ್ನಾಬಾಯಿ
ಶ್ರೀ|| ದಾಶರಥಿ ದೀಕ್ಷಿತ್
ಶ್ರೀ|| ಶನಿ

ಇತ್ಯಾದಿ, ಇತ್ಯಾದಿ.

ನಗೆಯ ಮಾಸಪತ್ರಿಕೆ


ಬರುತ್ತಿದೆ
ಪದ್ಮಿನಿ ಪಿಕ್ಚರ್ಸ್
ಹೆಮ್ಮೆಯಿಂದ ಪ್ರದರ್ಶಿಸುವ
ಮೊದಲ ತೇದಿ
ಕಲ್ಪನೆಯ ಕಾವ್ಯವಲ್ಲ
ಸಂಸಾರದ ಸರಳ ಚಿತ್ರ
ಕನ್ನಡ...
ಡೈರೆಕ್ಷನ್
ಪ. ನೀಲಕಂಠನ್

28–1–55 ರಿಂದ ಪ್ರದರ್ಶಿತವಾಗುತ್ತಿದೆ

ಬೆಂಗಳೂರು: ಗೀತಾ—ಲಕ್ಷ್ಮಿ (ಸಿವಿಲ್ ಏರಿಯಾ)

ಚಿತ್ರದುರ್ಗ: ಯೂನಿಯನ್

ಚಿತ್ರಮಂದಿರಗಳಲ್ಲಿ

ಭಾರತ ಸ್ತ್ರೀಯ ಸಂಸ್ಕೃತಿ ಮತ್ತು ಘನತೆಯನ್ನು ಪ್ರತಿಬಿಂಬಿಸುವ
ಮಹೋನ್ನತ ಚಿತ್ರ.

ರಾಗಿಣಿಯವರ—

ಅರ್ಧಾಂಗಿ

(ತೆಲುಗು)

[ಸ್ವಯಂಸಿದ್ಧ ಕಥೆ]



ತಾರಾಗಣ:

ಸಾವಿತ್ರಿ — ನಾಗೇಶ್ವರರಾವ್ — ಕುಟುಂಬರಾವ್ — ಜಗ್ಗಯ್ಯ

ಶಾಂತಕುಮಾರಿ — ಬಾಲಸರಸ್ವತಿ — ಬಿ. ಎನ್. ಆರ್.

ಡೈರೆಕ್ಷನ್: **ಪಿ. ಪುಲ್ಲಯ್ಯ**

ಮುಂದಿನ ಬದಲಾವಣೆ: **ಮೈಸೂರು - ರಣಜಿತ್**

A RAJSHRI RELEASE



Koravanji, February 1955

ಕೊರವಂಜಿ

A. ANANTHIAH.

ಸಂಪುಟ ೧೩ ಫೆಬ್ರವರಿ ೧೯೫೫ ಸಂಚಿಕೆ ೧೧

ಕುಹಕಿಡಿಗಳು

ರಾಜೀವಪುರದ ಸಚಿವರಿಗೆ ಸಾರ್ವಜನಿಕ ಕಾರ್ಯಗಳಲ್ಲಿ ಅಪರಿಮಿತ ಆಸಕ್ತಿ ಇದೆ. (ಪತ್ರಿಕೆ).

—ಎಲ್ಲಿ! ಸರ್ಕಾರದ ಕೆಲಸದಲ್ಲಿ ಅಷ್ಟೇ ಆಸಕ್ತಿ ಇರುವ ಸಚಿವರನ್ನು ತೋರಿಸಲಿ! - ರಾಜೀವಪುರದಲ್ಲಿ!!

* * *

ನಮ್ಮಾಕೆ ಸಂಡಿಗೆ ಇಟ್ಟು ಒಣಗಿಸಿ, ಕರಿದರೆ, ಸ್ವರ್ಗವೇ ಸಿಕ್ಕಿತಂತೆ, ಆದರೆ ಸಂಡಿಗೆ ಇಟ್ಟು, ನನ್ನನ್ನು ಒಣಗಿಸಿ ಕರಿಯುತ್ತಾಳೆ ಏನುಮಾಡಲಿ ಎಂದೊಬ್ಬರು ದೈನ್ಯಪತ್ರ ಬರೆದಿದ್ದಾರೆ—

—ಆಸೆಂಬ್ಲಿಗೆ ಮೆಂಬರುಮಾಡಿಸಿ—

* * *

ಆಟೊ ರಿಕ್ಷಾದಲ್ಲಿ ಪ್ರಧಾನ ಸಚಿವರು ಪ್ರಯಾಣ ಮಾಡಿದರಂತೆ ಅಂದಿನಿಂದೀಚೆಗೆ ಆಟೋ ರಿಕ್ಷಾಗಳೆಲ್ಲವೂ ಪ್ರಧಾನ ಸಚಿವರೇ ಕೂತಿದ್ದಾರೆ ಎಂಬ ರೀತಿಯಲ್ಲಿ ನಡೆಯುತ್ತಿರುವುದು ದಿಟ!

* * *

ಜನವರಿ ೨೬ ರಂದು ದೇಶದಲ್ಲಿ ರಿಪಬ್ಲಿಕ್ ದಿನ

,, ೩೦ ರಂದು ಮನಸ್ಸಿನಲ್ಲಿ ಹುತಾತ್ಮರ ದಿನ

ಫೆಬ್ರವರಿ ೧ ರಂದು ಹೆಂಡತಿಗೆ ನಮ್ಮ ಸಂಬಳ ದೊರಕುವ ದಿನ

,, ೩ ರಿಂದ ಯಥಾಪ್ರಕಾರ ಭಿಕ್ಷದ ದಿನಗಳು

ಎಂದೊಬ್ಬರು ಡೈರಿ ಒಪ್ಪಿಸಿದ್ದಾರೆ.

* * *

ಬಾಜಿಕಟ್ಟಿ ಪಗಡೆ ಆಡುತ್ತಿದ್ದ ಗಂಡನೊಬ್ಬ ಹೆಂಡತಿಯಿಂದ ಒಂದು ಸಾಯಂಕಾಲದಲ್ಲಿ ಮೂರು ರೂಪಾಯಿಗಳನ್ನು ಗೆದ್ದನಂತೆ.

— ಖಾಮೂಷ್! ಎಲ್ಲಾದರೂ ದೇಶಮುಖರಿಗೆ ಕೇಳಿಸಿದರೆ ಅದಕ್ಕೂ ತೆರಿಗೆ ಬೀಳುತ್ತೆ!! ಬಿದ್ದ ತೆರಿಗೇನ ಅವರೇ ವಸೂಲ್ಮಾಡಬಹುದು?

* * *

ಹೆಬ್ಬಾವಿನ ಚರ್ಮದಲ್ಲಿ ಮಾಡಿದ ಚಪ್ಪಲಿಗಳನ್ನು ನಮ್ಮ ನಾಯಕರಿಗೆ ಕೊಡಲಾಯಿತಂತೆ.

—ತಾಮಸ ಏಕೆ ಅವರ ಕೆಲಸಗಳಲ್ಲಿ ಎಂಬುದು ಈಗರ್ಥವಾಯಿತೇ?

* * *

ಕೋಡುಬಳೆ ತಿಂದೂ ತಿಂದೂ ಟೆನ್ನಿಕಾಯ್ಟ್ ಚಾಂಪಿಯನ್ನಾದೆ ಎಂದು ಶ್ರೀಮತಿ ಕೋಡುನಾಯಕಿಯವರು ಮಹಿಳಾ ಕಾಲೇಜಿನಿಂದ ಪತ್ರವನ್ನು ಇನ್ನೂ ಬರೆದಿಲ್ಲ.

* * *

ಆಂಧ್ರದಲ್ಲಿ ಚುನಾವಣಾ ಪ್ರಚಾರಕ್ಕೆ ಸಿನಿಮಾ ತಾರೆಯರು ಬೆಂಬಲ ಕೊಡುತ್ತಿದ್ದಾರಂತೆ.

—ಅಮೇರಿಕಾದಂತೆ "ಓಟಿಗೊಂದು ಮುತ್ತು" ಇನ್ನೂ ಆರಂಭವಾಗಿಲ್ಲವಂತೆ.

* * *

ಮುತ್ತಾತನ ಹೆಸರನ್ನು ಮೊಮ್ಮಗನಿಗಿಡುವುದು ಕೆಲವರ ವಾಡಿಕೆ, ಆದರೆ ಇನ್ನು ಮೇಲೆ ಪದ್ಮ ಭೂಷಣಯ್ಯನವರ ಮನೆತನದವರಿಗೆ ಸ್ವಲ್ಪ ಕಷ್ಟವಾಗಬಹುದಲ್ಲವೇ?

* * *

ಮದುವೆಗಳಲ್ಲಿ ಓದಿಸುವ ವಸ್ತುಗಳು ವಧೂವರರಿಗಿಂತ ಕೊಟ್ಟವರಿಗೆ ಹೆಚ್ಚು ಖುಷಿ ಕೊಡುತ್ತದೆ. (ಕೊಡುಗನ ಹೇಳಿಕೆ)

ದಿಟ!!

* * *

ಉರಿಗಾಳು

"ನನ್ನ ಪ್ರವಾಸ ಕಾಲದಲ್ಲಿ, ಭಾರತದಲ್ಲಿ ಏನು ನಡೆಯುತ್ತಿದೆ, ಎಂಬುದನ್ನೆಲ್ಲ ನಾನು ಚೆನ್ನಾಗಿ ಅರಿತುಕೊಂಡಿದ್ದೇನೆ", ಎಂದು ಮಾರ್ಷಲ್ ಟೀಟೊ ಅವರು ಹೇಳಿದರು.... ಹಾಗಾದರೆ, ನನ್ನದೊಂದೇ ಪ್ರಾರ್ಥನೆ. ದಯವಿಟ್ಟು ತಾವು ಅದನ್ನೆಲ್ಲ ಗುಟ್ಟಾಗಿಟ್ಟುಕೊಳ್ಳಿ.

*　　　　*　　　　*

ನಿರುದ್ಯೋಗ ನಿರ್ಮೂಲನಕ್ಕಾಗಿ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹ ನೀಡಬೇಕೆಂದು ಶ್ರೀ ಢೇಬರ್‌ರವರು ಹೇಳಿದರು.. ಹೌದು! ಊರಿಗಿಬ್ಬಿಬ್ಬರು ಪೂಟ್ ಲಾಯರುಗಳಿರುವಂತೆ ಮಾಡಿದರೆ, ಗ್ರಾಮಗಳಲ್ಲಿ ಚಟುವಟಿಕೆ ಹೆಚ್ಚಿ, ಅವರು ಉದ್ಯೋಗನಿರತರಾಗುತ್ತಾರೆ.

*　　　　*　　　　*

ನೂತನ ಕಾಂಗ್ರೆಸ್ ಅಧ್ಯಕ್ಷರು ತಮ್ಮ ಭಾಷಣವನ್ನು ೪-೩೦ಕ್ಕೆ ಪ್ರಾರಂಭಿಸಿ, ೫-೨೦ಕ್ಕೆ ಮುಗಿಸಿದರು....ಕಾಂಗ್ರೆಸ್ ಅಧಿಕಾರಿಗಳೂ ಮಂತ್ರಿಗಳೂ ತ್ಯಾಗ ವೈರಾಗ್ಯಗಳಿಗೆ ಮನ್ನಣೆಕೊಟ್ಟು ಇನ್ನು ಮೇಲೆ, ಹಿತಮಿತವಾಗಿ ಬಾಳಿ ಬದುಕಬೇಕೆಂಬ ನೀತಿಗನುಗುಣವಾಗಿ ಇರಬೇಕು, ಈ ಅತ್ಯಂತ ಪುಟ್ಟ ಭಾಷಣ.

*　　　　*　　　　*

ಸೆಂಟ್ರಲ್ ಕಾಲೇಜು ವಿಜ್ಞಾನ ಪ್ರದರ್ಶನ ಕಾಲದಲ್ಲಿ ಅಲ್ಲಿಯ ಹಲವರ ಅಜ್ಞಾನ ಪ್ರದರ್ಶನವೂ ನಡೆಯಿತೆಂದು ಒಬ್ಬರು ಪತ್ರ ಬರೆದಿದ್ದಾರೆ.

*　　　　*

ಮುನ್ನೂರಕ್ಕೂ ಹೆಚ್ಚುಮಂದಿ ಎ. ಐ. ಸಿ. ಸಿ. ಪ್ರತಿನಿಧಿಗಳು ಬಂದಿದ್ದರೂ, ವಿಷಯನಿಯಾಮಕ ಸಮಿತಿ ಅಧಿವೇಶನಕ್ಕೆ ಕೇವಲ ೧೯೫ ಜನ ಸದಸ್ಯರು ಮಾತ್ರ ಬಂದಿದ್ದರು. (ಸುದ್ದಿ) ...ಉಳಿದವರಿಗೆ ವಿಷಯವೇ ಗೊತ್ತಿರಲಿಲ್ಲವಂತೆ.

*　　　　*　　　　*

ನ್ಯಾಷನಲೈಸೇಷನ್ ಎಂಬ ಪದಕ್ಕೆ ರಾಷ್ಟ್ರೀಯಕರಣ್ ಎಂಬುದು ಸರಿಯಾದ ಹಿಂದಿಪದ ಅಲ್ಲ ಎಂದು ಟೀಕಿಸುತ್ತಾ, ನೆಹರು ಅವರು ನ್ಯಾಷನಲೈಸೇಷನ್ ಎಂದೇ ಹೇಳುತ್ತಾ ಭಾಷಣವನ್ನು ಮುಂದುವರಿಸಿದರಂತೆ.

*　　　　*　　　　*

ಮಾಯಾಬ್ಯಾನರ್ಜಿ ಎಂಬ ಹೆಸರಿನ ಡೆಲಿಗೇಟೊಬ್ಬರು ಆವಡಿ ಅಧಿವೇಶನಕ್ಕೆ ಬಂದಿದ್ದರಿಂದಲೇ, ಅಪರಿಮಿತ ಸಂಖ್ಯೆಯಲ್ಲಿ ಯುವಕ ಪ್ರೇಕ್ಷಕರು ಆವಡಿಯಲ್ಲಿ ಕಿಕ್ಕಿರಿದಿದ್ದರೆಂದು ಸಿನಿಮಾ ಪತ್ರಿಕೆಯೊಂದು ಲೇಖನ ಬರೆದಿದೆ.

* * *

ಕೆ ಪಿ. ಸಿ. ಸಿ. ಅಧ್ಯಕ್ಷರಾಗಿ ಶ್ರೀ ಅಂಬಲಿಯವರು ಆರಿಸಿಬಂದಿರುವುದು, ಏಕೀಕರಣಕ್ಕೆ ದೊಡ್ಡ ಪೆಟ್ಟು, ಎಂದು ಪತ್ರಿಕೆಗಳು ಟೀಕಿಸಿವೆ... ಮೈಸೂರು ಸರ್ಕಾರ ನೇಮಿಸಿದ ಶೇಷಾದ್ರಿ ಸಮಿತಿಯವರೂ ಕೂಡ, ಕರ್ಣಾಟಕ ಏಕೀಕೃತವಾದರೆ, ಅಂಬಲಿಯೇ ಗತಿ, ಎಂದು ಆಗಲೇ ಸಾರಿತ್ತಲ್ಲಾ.

* * *

ಥಾಮಸ್ ಆಗ್ನೆ ಎಂಬ ಅಮೇರಿಕನ್ ಖೈದಿ ಒಬ್ಬ ೨೫ ದಿನಗಳತನಕ ಊಟ ಮಾಡದೆ ಇದ್ದರೂ, ಅವನ ತೂಕ ಏನೂ ಕಡಮೆಯಾಗಲಿಲ್ಲವಂತೆ.... ನಮ್ಮಲ್ಲಿ ಅನೇಕರು ಉಪವಾಸವ್ರತವನ್ನಾಚರಿಸಿ, ಸಮಾಜದಲ್ಲಿ ತಮ್ಮ ತೂಕವನ್ನು ಹೆಚ್ಚಿಸಿ ಕೊಂಡಿದಾರಲ್ಲಾ.

* * *

ಜನತಾ ಚೀಣಕ್ಕೂ ಚ್ಯಾಂಗ್ ಕೈಷೇಕ್‌ರಿಗೂ ನಡುವಣ ಹೋರಾಟವನ್ನು ನಿಲ್ಲಿಸುವ ಯಾವುದೇ ಕ್ರಮಕ್ಕೂ ತಮ್ಮ ಸಹಾನುಭೂತಿಯಿದೆ, ಎಂದು ಬ್ರಿಟಿಷ್ ಸರ್ಕಾರ ತಿಳಿಸಿದೆ.. ಅಂದರೆ, ಚ್ಯಾಂಗ್ ಕೈಷೇಕ್‌ರನ್ನು ಸದೆಬಡಿದು, ಜನತಾ ಚೀಣದ ವಶಕ್ಕೊಪ್ಪಿಸುವುದಕ್ಕೂ.

* * *

ಭಾರತದ ಸೆಕ್ರಟೇರಿಯಟ್ಟುಗಳಲ್ಲೆಲ್ಲಾ ಅನೇಕ ವರ್ಗಗಳಿಂದಲೂ ಗುಮಾಸ್ತರು ಕೈಗೊಂಡಿರುವ "ಪೆನ್ ಡೌನ್" ಸ್ಟ್ರೈಕನ್ನು ಇನ್ನೂ ಕೆಲಕಾಲ ಮುಂದುವರಿಸಲೇ ಬೇಕೆಂದು ಮೊನ್ನೆ ನಿರ್ಧರಿಸಲಾಯಿತಂತೆ.

* * *

ನಾಗಪುರದಲ್ಲಿ ಕಾಲೇಜು ವಿದ್ಯಾರ್ಥಿಗಳು ಮೂರು ಜನರು, ಒಂದೇ ಸೈಕಲ್ ಮೇಲೆ ಸವಾರಿಮಾಡುತ ಹೋಗುತ್ತಿದ್ದಾಗ, ಅವರನ್ನು ಪೋಲೀಸಿನವರು ಹಿಡಿದು ನಿಲ್ಲಿಸಿದರಂತೆ; ತಾವೂ ಆ ಸೈಕಲ್ ಹತ್ತುತ್ತೇವೆ, ಅವಸರದ ಕೆಲಸ ಇದೆ, ಅಂತ ನಿಲ್ಲಿಸಿರಬೇಕು

* * *

ಕೊರವಾವಲೋಕನ

"ಹಾರೋತಟ್ಟೆ" "ಹಾರೋತಟ್ಟೆ" ಅಂತ ಕೂಗಿದ ಕುಳ್ಳೈಯ್ಯಂಗಾರಿ ಕ್ಲಬ್ಬಿನಲ್ಲಿ, ಪಾದರಸದ ಹಾಗೆ ಹಿಂದಕ್ಕೂ ಮುಂದಕ್ಕೂ ಹಾರಾಡ್ತಿದೆ ಅಂತ ಅಂದ. ಎಲ್ಲೋ! ಎಲ್ಲೋ! ಎಂದು ವರಾಂಡಾದಲ್ಲಿದ್ದ ನಾಲ್ಕಾರುಜನ ಕೇಳಿದೆವು, ಆಕಾಶ ದಲ್ಲಿ ನಮಗೆ ಏನೂ ಕಾಣಿಸಲಿಲ್ಲವಾದ್ದರಿಂದ

ಕೊರವ ಆಗತಾನೇ ಬಂದ. ಕುಳ್ಳೈಯ್ಯಂಗಾರಿ ಅವನಿಗೂ ಹೇಳಿದ ವಿಷಯವನ್ನ.

ದುರುಗುಟ್ಟಿಕೊಂಡು ನೋಡುತ್ತಾ, ಕುಳ್ಳೈಯ್ಯಂಗಾರಿಯ ಕನ್ನಡಕವನ್ನು ಕೊರವ ಕಳಚಿದ. ಗಾಜನ್ನು ತನ್ನ ಕೈವಸ್ತ್ರದಿಂದ ಒರೆಸಿದ. ತಿರುಗಿ ಅವನಿಗೆ ಕೊಟ್ಟು, "ನಿನ್ನ ಹಾರೋತಟ್ಟೆ ಈಗಿದೆಯೋ ನೋಡು, ನೀನು ಆಶ್ಚರ್ಯದಿಂದ ತಲೆಯಾಡಿಸಿದಹಾಗೆಲ್ಲಾ ಕನ್ನಡಕದಮೇಲೆ ಬಿದ್ದಿದ್ದ ಚಟ್ನಿ ತುಣುಕು ಹಾಗೆ ಕಾಣಿಸಿತು ನಿನಗೆ" ಅಂದ.

ಕುಳ್ಳೈಯ್ಯಂಗಾರಿ ಕನ್ನಡಕ ಹಾಕ್ಕೊಂಡು ಹೌದಲ್ಲಾ ಈಗ ಹಾರೋತಟ್ಟೆ ಇಲ್ಲವಲ್ಲಾ ಎಂದು ಮೂಗು ಉದ್ದಮಾಡಿಕೊಂಡ.

* * *

ಪತ್ರಿಕೆಗಳ ಕೊಠಡಿಯಿಂದ ನಗು ಕೇಳಿಸಿತಾದ್ದರಿಂದ, ನಾನು ಅಲ್ಲಿಗೆ ಹೋದೆ, ಪೊಂಗಲ್‌ದಿನ ಸಂಜೆ. ಕೊರವ ತನ್ನ ಮೂಗಿನ ತುದೀಗೆ ಪೆನ್ಸಿಲ್ಲಿನ ತಳವನ್ನು ಅದುಮಿ ಹಿಡಿದಿದ್ದ. ಬಲು ಏಕಾಗ್ರ ಚಿತ್ತತೆಯಿಂದ ಯಾವುದೋ ವೋಸಪತ್ರಿಕೆ ಯನ್ನು ಓದುತ್ತಿದ್ದ. ಮೇಜಿನ ಎದುರಿನಲ್ಲಿದ್ದ ಮೂವರು ಕ್ಲಬ್ಬು ಮೆಂಬರುಗಳು ಕೊರವನ ಈ ಲಕ್ಷಣಮುಖವನ್ನು ಕಂಡು ನಗುತ್ತಿದ್ದರು. ಕೊರವನಿಗೆ ಇದರ ಪರಿವೆಯೇ ಇದ್ದಂತೆ ಕಾಣಿಸಲಿಲ್ಲ.

ನಾನು ನೋಡಿದಾಗ ದಿಟವಾಗಲೂ ಬಿಕ್ಕಿ ಬಿಕ್ಕಿ ನಗುವಂತಾಯಿತು. ಕೊರವನ ಮೂಗು ಸ್ವಲ್ಪಮಟ್ಟಿಗೆ ಚೂಪೇ. ಆದರೂ ಅದನ್ನು ಒತ್ತಿಕೊಂಡರೆ ಈ

ರೀತಿ ಅದು ಎರಡು ಚಪ್ಪಟೆಯಾಗಿ ಮುಖವನ್ನೇ ಅತಿ ಅವಮಾನುಷಮಾಡಿತ್ತು. ಸ್ವಾನಂದೆ ಕೊರವನಿಗೆ "ಹೀಗೇ ನೀನು ಒಂದು ಫೋಟೋ ಹಿಡಿಸಿಕೊಂಡರೆ ಬಲು ಚೆನ್ನ" ಅಂತ.

ಆಗ ಕೊರವ ಪತ್ರಿಕೆ ಕೆಳಗಿಟ್ಟ. ಪೆನ್ಸಿಲ್ಲನ್ನು ತೆಗೆದ. "ಹೇಗೆ ಫೋಟೋ ಹಿಡಿಸಬೇಕು, ಪತ್ರಿಕೆ ಓದುತ್ತಲೇ" ಎಂದ. "ಅಲ್ಲಾ ಕಣೋ ಮೂಗಿನ ತುದಿಗೆ ಪೆನ್ಸಿಲ ತಳ ಅದುಮಿಕೊಂಡು" ಎಂದು ವಿಷದೀಕರಿಸಿದೆ.

ಆ ರೀತಿ ತೆಗೆಸಿಕೊಂಡ ಫೋಟೋನ ಈಗ, ಈ ಕ್ಷಣ ನಿನಗೆ ತೋರಿಸಿದರೆ ಹತ್ತುರೂಪಾಯಿ ಕೊಡ್ತೀಯಾ ಎಂದ.

ಈ ರೀತಿ ಫೋಟೋ ಹಿಡಿಸಿಕೊಳ್ಳಲು ಇವನೇನು ಚಲನಚಿತ್ರ ತಾರೆಯೇ ಹಾಗೂ ಈ ಕ್ಷಣ ಎಲ್ಲಿಂದ ತರ್ತಾನೆ ಅಂತ ಧೈರ್ಯವಾಗಿ ಆಗಲಿ ಕೊರವ, ಆದರೆ ಫೋಟೋ ತೋರಿಸದೆ ಇದ್ದರೆ ನೀನು ಹತ್ತುರೂಪಾಯಿ ಪೀಕ ಬೇಕು ಎಂದೆ. ಸೈ ಎಂದ. ಕೊರವ.

ಒಳಜೇಬಿನಿಂದ ಫೋಟೋ ತೆಗೆದಿಟ್ಟ. ಥೇಟ್ ಅದೇ ಪೋಸಿನ ಫೋಟೋ!– ಶುದ್ಧ ಕುರಿಯಂತೆ ತಲೆತಗ್ಗಿಸಿಕೊಂಡು, ಜೇಬಿನಿಂದ ಹತ್ತುರೂಪಾಯಿ ಪೀಕಿದೆ.

ಹೀಗಾಗುತ್ತೆ ಅಂತಲೇ ನಾನು ಆ ರೀತಿ ಕೂತಿದ್ದು ಕಣೋ! ನಿನ್ನೆದಿನ ಇಸ್ಪೀಟಿನಲ್ಲಿ ಹತ್ತುರೂಪಾಯಿ ಕಳಕೊಂಡಿದ್ದೆ. ಇವತ್ತು ಲೆಕ್ಕ ಸರಿಮಾಡಿಕೊಂಡೆ ಎಂದ ನಾಲಗೆ ಚಪ್ಪರಿಸುತ್ತಾ.

*　　　*　　　*

ವ್ಯಾಸಾಚಾರೀಗೆ ಕೂಟ, ಪರಿಶೆ, ಸಮ್ಮೇಳನ, ಸಂತೆ ಅಂದರೆ ಅದೇನೋ ಹುಚ್ಚು. ಉಣ್ಣಾಕ್ಕೆ ತಿನ್ನಾಕ್ಕೆ ಸಾಕಷ್ಟಿದೆ. ಉಡುಕ್ಕೆ ಬೆಡಗುಕ್ಕೂ ಸಾಕಷ್ಟಿದೆ. ಆದರೆ ಎಲ್ಲಿ ಸಂತೆ ಆಗಲೀ ಅಲ್ಲಿ ಹಾಜರು. ಎರಡುದಿನ ಮುಖತೊಳೆಯಲು ನೀರಿಲ್ಲದೆ ಇರುವಂತಹ ಸ್ಥಳದಲ್ಲೂ ಕೂಡ ಜಾತ್ರೆ ಅಂದರೆ ಸಿದ್ಧ. ಅಂದಮೇಲೆ ಕ್ಲಬ್ಬಿನಿಂದ ಮೂರುದಿನ ನಾಪತ್ತೆ, ಜನವರಿ ೨೦–೨೧–೨೨–

ಆವಡಿ ಪರಿಶೆಗೆ ವೀಕ್ಷಕನಾಗಿ ಹೋಗೇ ಇರಬೇಕು ಅಂತ ಅಂದುಕೊಂಡೆವು.

ನಾಲ್ಕನೆಯ ಸಾಯಂಕಾಲ ಕ್ಲಬ್ಬಿನಲ್ಲಿ ವ್ಯಾಸಾಚಾರೀ ಹಾಜರು, ಯಥಾ ಪ್ರಕಾರ. ಒಬ್ಬೊಬ್ಬರೂ ಒಂದೊಂದು ಪ್ರಶ್ನೆ ಗುಮ್ಮಿದೆವು.

"೩೦,೦೦೦ ಇಡ್ಲಿಮಾಡೋ ಪಾತ್ರೇನ ನೋಡಿದೆಯಾ ?"

"ಇಡ್ಲಿ ಹಿಟ್ಟನ್ನು ಯಾವ ರಾಕ್ಷಸ ತಿರುವುತ್ತಾ ಇದ್ದ"

"ಮೊಳಗು ತಣ್ಣಿಯನ್ನು ದೊನ್ನೇಲಿ ಹಂಚಿದರೋ, ಲೋಟಾಗಳಲ್ಲೋ"

"ಪರ್ಮಿಟ್ಟರೋ ಸರಬರಾಜಿಗೆ ಸರಿಯಾದ ವ್ಯವಸ್ಥೆ ಇತ್ತೇ"

"ಹಾರಾಡೋ ತರ್ಕಾರಿಗೆ ಏನು ಏರ್ಪಾಡು ಮಾಡಿದ್ದರು"

"೨ಲಕ್ಷಜನ ಗೊರಕೆ ಹುಯ್ತಾ ಇದ್ದಾಗ ನಿದ್ರೆ ಬರುತ್ತಿತ್ತೇ"

"ಹೆಂಗಸರು ಮಕ್ಕಳ ಪಾಡೇನು"

ಅಷ್ಟುಹೊತ್ತೂ ಕೊರವ ಕೇಳ್ತಾ ಇದ್ದೋನು ತಾನು ಒಂದು ಪ್ರಶ್ನೇನೂ ಕೇಳಲೇ ಬೇಡವೇ? ಸುಮ್ಮನೆ ಇದ್ದ.

"ಯಾಕೆ ಕೊರವ ನಿಂದೇನೂ ಪ್ರಶ್ನೆ ಇಲ್ಲವೇ? ಕಡೆಗೆ ಅಧ್ಯಕ್ಷನ ಪೂರ್ತಿ ಹೆಸರೇನು ಅಂತಲಾರೂ ಕೇಳಬಾರದೆ" ಎಂದೆ.

ನಕುಲಸಹದೇವರು ದ್ರೌಪದೀನ ಮದುವೆ ಮಾಡಿಕೊಂಡಹಾಗೆ ಶ್ರಿ ದೇಬಾರ್ ರವರು ಕಾಂಗ್ರೇಸ್ ಕಂಕಣ ಕಟ್ಟಿಕೊಂಡಿರೋವಾಗ ಅದನ್ನಾದರೂ ಯಾಕೆ "ಕೇಳ ಬೇಕಯ್ಯಾ" ಎಂದ.

ಆಗಂದ ವ್ಯಾಸಾಚಾರಿ ಮೂರುದಿನದಿಂದ ಮನೆಕೆಲಸದಲ್ಲಿ ನಿರತನಾಗಿದ್ದ ಕಾರಣ ಹೊರಬರಲಿಲ್ಲ. ಆವಡೀನೂ ಕಾಣೆ ಈವಡೀನೂ ಕಾಣೆ ಅಂತ.

ಸರ್ವೋದಯದ ದಿನದಿಂದ ಶಾಲೆಗಳು ಆರಂಭವಾಗುತ್ತಾದ್ದರಿಂದ, ಪ್ರಯಾಸ ವಿಲ್ಲದೇ ಮುಂದಿನ ತರಗತಿಗೆ ಹೋಗುವುದಾದ್ದರಿಂದ, ಮನೇ ಮಾಸ್ತರುಗಳ ಉಪ ಕಸುಬಿಗೆ ಧಕ್ಕೆ ಬಂದಿದೆ ಎಂಬುವುದು ಶುದ್ಧ ಸುಳ್ಳಂತೆ.

ನೀತಿ ಕಥನ

ಒಂದು ಊರಲ್ಲಿ ಕುರಿಗಳೆಲ್ಲಾ ಸಭೆಸೇರಿದುವಂತೆ. ಅಹಿಂಸಾ ಮಾರ್ಗದಿಂದ, ಹದಿನಾರಾಣೆ ಸಸ್ಯಾಹಾರ ಮಾಡಿಕೊಂಡು, ಸಹ ಜೀವನಕ್ಕೆ ಮೇಲ್ಪಂಕ್ತಿ್ಯಾದಂತೆ ನಾವು ಸಂಸಾರ ಮಾಡಿಕೊಂಡು, ಮಕ್ಕಳು ಮರಿಗಳನ್ನು ಪ್ರೀತಿಯಿಂದ ಸಾಕುತ್ತಿದ್ದರೆ, ಈ ಕಸಾಯಿ ಅಂಗಡಿಯೋರು ಇಬ್ಬರೂ ಕತ್ತೀನ ಹರಿತಮಾಡಿಕೊಂಡು, ಹಲ್ಲು ಕಿರಿಯುತ್ತಾ, ತುಟಿಕಚ್ಚುತ್ತಾ, ನಮ್ಮನ್ನು ಹಿಡಿದುಕೊಂಡು ಹೋಗಿ ಫನಾ ಮಾಡುತ್ತಾರಲ್ಲಾ! ಇದಕ್ಕೇನು ಶಾಸ್ತಿಯೇ ಇಲ್ಲವೇ? ಇದಕ್ಕೆ ಪರಿಹಾರ ದೊರೆಯದೇ! ಎಂದು ಸಭೆಯಲ್ಲಿ ಚರ್ಚೆ ಮಾಡುತ್ತಿದ್ದುವಂತೆ.

ವೃದ್ಧರೊಬ್ಬರಿಂದ, ಅನುಭವಿಗಳೊಬ್ಬರಿಂದ ಒಂದು ಸಲಹೆ ಬಂತಂತೆ. ನಾವೆಲ್ಲಾ ಒಂದು ಬಹಿರಂಗ ಹೇಳಿಕೆ ಕೊಡೋಣ. ಕಸಾಯಿ ಅಂಗಡಿಯವರಿಬ್ಬರಿಗೂ ಹೇಳಿಕೊಳ್ಳೋಣ. "ಈರೀತಿ ಈಗ ಈ ಹಿರಿದ ಕತ್ತಿಗಳಿಂದ ನೀವು ನೀವೇ ಹೊಡೆದಾಡಲು ಆರಂಭಿಸುತ್ತೀರಿ. ಆದಕಾರಣ ಈಗಲೇ ನೀವು ಕತ್ತಿಗಳನ್ನು ಕೆರೆಗೆ ಹಾಕಿ. ಅಹಿಂಸಾ ಮಾರ್ಗದಿಂದ ಜೀವಿಸಿ. ಸಹಜೀವನ ತತ್ವವನ್ನು ಒಪ್ಪಿಕೊಳ್ಳಿ. ನಿಮ್ಮ ಸಂತಾನವು ಬಾಳಿಬದುಕುವಂತೆ ಆಗಲಿ" ಎಂದು.

ಭೇಷ್! ಎಂದಿತು ಸಭೆ. ಸೈ ಎಂದಿತು ಸಭೆ. ಠರಾವು ಅನುಮೋದಿಸಲ್ಪಟ್ಟಿತು. ಠರಾವಿನ ಪ್ರತಿಗಳು ಕಸಾಯಿ ಅಂಗಡಿಯವರಿಗೆ ಮುದ್ದಾಂ ಅಲ್ಲದಿದ್ದರೂ ಅಂಚೆಯ ಮೂಲಕ ಕಳಿಸಲ್ಪಟ್ಟಿತು.

ಕಸಾಯಿ ಅಂಗಡಿಯವರಿಬ್ಬರೂ ಆ ಠರಾವಿನ ಪ್ರತಿಗಳಮೇಲೇ ತಮ್ಮ ಕತ್ತಿಗಳ ಹರಿತವನ್ನು ಪರೀಕ್ಷೆಮಾಡಿಕೊಂಡರಂತೆ.

ನೀತಿ

—ಆತ್ಮತೃಪ್ತಿಗೆ ಏನನ್ನಾದರೂ ಮಾಡಿ–ಆದರೆ ಫಲದ ನಿರೀಕ್ಷಣೆ ಬೇಡವೇ ಬೇಡ.

“ಸಂಬಂಧೀಕರು”

ಅಮ್ಮ ಕಾಗದ ಬರೆದಿದ್ದಳು, ಕಾಲೇಜಿಗೆ ಶನಿವಾರ ರಜಾಬಂದರೆ, ಸಿದ್ಧೀಕಟ್ಟೀಲಿ ಇರೋ ವೆಂಕಜ್ಜೀನ ನೋಡಿಕೊಂಡುಬಾ ಅಂತ. ಆ ಕಾಗದ ಬಂದು ಆರು ತಿಂಗಳಾಗಿತ್ತು. ಪ್ರತಿ ಶನಿವಾರ ಒಂದು ಸ್ಪೆಷಲ್‌ಕ್ಲಾಸು, ಅಥವಾ ಒಂದು ಹೊಸ ಸಿನಿಮಾ. ಹೀಗಾಗಿ ಬಿಡುವೇ ಆಗಲಿಲ್ಲ. ಇನ್ನೆರಡು ತಿಂಗಳಲ್ಲಿ ಪರೀಕ್ಷೆ ಮುಗಿಯುತ್ತೆ. ಹಿಂತಿರುಗಿ ಊರಿಗೆ ಹೋದಾಗ ಬೆಂಗಳೂರಿನಲ್ಲಿ ವೆಂಕಜ್ಜೀನ ನೋಡಲಿಲ್ಲ ಅಂದರೆ ಅಮ್ಮನಿಗೆ ಕೋಪಬರುತ್ತೆ; ಅಮ್ಮನಿಗೆ ಅವರ ತಾಯಿಕಡೆ ಬಳಗ ಅಂದರೆ ವೆಂಕಜ್ಜಿ ಒಬ್ಬಳೇ ಬದುಕಿರೋದು; ಎಷ್ಟೇ ಕಷ್ಟವಾಗಲಿ ಹೋಗಿಬರೋಣ ಅಂತ ಸಿದ್ಧೀಕಟ್ಟೆಗೆ ಶನಿವಾರ ಮಧ್ಯಾಹ್ನ ಹೋದೆ. ವೆಂಕಜ್ಜಿ ಮನೇನೂ ಸುಲಭವಾಗಿ ಸಿಕ್ಕಿತು. ಎರಡು ಹುರಿಗಾಳು ಅಂಗಡಿ ಮಧ್ಯೆ ಇರೋ ಬಾಗಿಲಲ್ಲಿ ನೇರನೆ ಹೋದರೆ ವೆಂಕಜ್ಜಿ ಮನೆಯ ವರಾರ ಒಂದು ಫರ್ಲಾಂಗಲ್ಲೇ ಸಿಗುತ್ತೆ ಅಂತ ಕಾಗದದಲ್ಲಿ ಬರೆದಹಾಗೇ ಇತ್ತು. ವರಾರದಲ್ಲಿ ವೆಂಕಜ್ಜಿ, ಗೆಜ್ಜೆವಸ್ತ್ರ ಮಾಡ್ತಾ ಕೂತಿದ್ದಳು. ನಾನು ಹೋಗಿ “ವೆಂಕಜ್ಜಿ! ವೆಂಕಜ್ಜಿ! ನಾನು ಲೀಲ ಬಂದಿರೋದು, ಸಾತಕ್ಕನ ಮಗಳು. ಇಲ್ಲೇ ಮಹಾರಾಣೀ ಕಾಲೇಜಲ್ಲಿ ಓದುತ್ತಿದ್ದೇನೆ” ಎಂದೆ.

ವೆಂಕಜ್ಜಿ ಬೆಳ್ಳಿ ಕಟ್ಟಡದ ಕನ್ನಡಕ ಹಾಕಿಕೊಳ್ಳುತ್ತಾಳೆ. ಬಿಳಿದಾರದಲ್ಲಿ ಆ ಕನ್ನಡಕದ ಸೇತುವೆಯನ್ನು ಅಲಂಕರಿಸಿದ್ದಾಳೆ. ತಲೆಯ ಬಿಳೀಕೂದಲಿಗೆ ಕನ್ನಡಕ ಎಷ್ಟು ಚೆನ್ನಾಗಿ ಒಪ್ಪುತ್ತೇ ಅಂತೀರಿ! ಆ ಕನ್ನಡಕವನ್ನು ಮೂಗಿನ ಮೇಲಿಂದ ಸ್ವಲ್ಪ ಕೆಳಕ್ಕೆ ಇಳಿಸಿ ಬರೀ ಕಂಗಳಲ್ಲಿ ನನ್ನನ್ನು ವೆಂಕಜ್ಜಿ ನೋಡಿದಳು. ದುರುಗುಟ್ಟಿಕೊಂಡೇ ನೋಡಿದಳು. ಲೀಲನೇನೇ! ನೀನು ಆಗ ನೋಡಿದಾಗ ಎಷ್ಟು ಲಕ್ಷಣವಾಗಿದ್ದೆಯೇ! “ಥೇಟ್ ಸಾತಕ್ಕನಹಾಗೇ ಇದ್ದೆಯಲ್ಲೇ! ಈಗೇನೆ ಹೀಗಾಗಿದೀ! ಕೋಲುಮುಖವಾಗಿದೆಯಲ್ಲೇ–ಅಷ್ಟು ಮಾಟವಾದ ಮುಖದಲ್ಲಿ ಕೆನ್ನೆಲುಬೇ ಎದ್ದು ಕಾಣುತ್ತಲ್ಲೇ!” ಎಂದು ನನ್ನನ್ನು ವಿಮರ್ಶಿಸಿ, ಅರಳಿಟ್ಟು ಹಾಲುಕೊಟ್ಟು ಕಳಿಸಿದಳು.

ಸಧ್ಯ! ಒಂದು ಜವಾಬ್ದಾರಿ ಕೆಲಸ ಮುಗೀತು ಅಂತ ಹಾಸ್ಟೆಲಿಗೆ ಹಿಂತಿರುಗಿದೆ. ಚಲ್ ಚಲ್‌ರೇ ನೌಜವಾನ್ ಹಾಡ್ತಾಲೇ ಹಿಂತಿರುಗಿದೆ. ಅಮ್ಮನಿಗೂ ಕಾಗದ ಬರೆದುಹಾಕಿದೆ.

ಮೂರನೆಯದಿನ ನಮ್ಮೂರಿನಿಂದ ಅಮ್ಮನ ಕಾಗದ ಬಂತು. "ಅಲ್ಲಾ ಲೀಲ. ವೆಂಕಜ್ಜೀನ ಹೋಗಿ ನೋಡಿದಾಗ ನಮಸ್ಕಾರ ಮಾಡಿ ಆಶೀರ್ವಾದ ಪಡೆಯದೇ, ಅಲ್ಲೆ ಎದುರಿಗೇ ಕೂತು ಗೆಜ್ಜೆವಸ್ತ್ರ ಎಲ್ಲಾ ಮುಟ್ಟಿ ಮೈಲಿಗೆ ಮಾಡಿದೆಯಂತಲ್ಲೇ! ಇಷ್ಟೂ ಬುದ್ಧಿ ಬೇಡವೇ ನಿನಗೆ. ಪಾಪ! ಆರು ವರ್ಷದಿಂದ ನಿನ್ನ ಮದುವೇಗೆ ಅಂತ ಗೆಜ್ಜೆವಸ್ತ್ರವನ್ನೆಲ್ಲಾ ಮಡೀಲಿ ಮಾಡಿಡುತ್ತಿದ್ದಾಳೆ-ನೀನೇ ಹೋಗಿ ಹೀಗೆ ಮಾಡ ಬಹುದೇ? ಅಂದಹಾಗೆ, ಮಧ್ಯಾಹ್ನಾ ಮೂರುಗಂಟೆಗೆ ಅಲ್ಲಿಗೆ ಹೋಗಿದ್ದೆಯಂತೆ-ತುಟಿಯೆಲ್ಲಾ ಎಲೆಡಿಕೆ ರಂಗಾಗಿತ್ತು ಅಂತ ವೆಂಕಜ್ಜಿ ಬರೆದಿದ್ದಾಳೆ. ನೀನು ಎಲೆಡಿಕೆ ಹಾಕೊಳ್ಳೋದಿಲ್ಲ ಅನ್ನೋದು ನನಗೆ ಗೊತ್ತು. ಈಗೀಗ ಉಗುರಿಗೆ ಹಚ್ಚೋ ಕೆಮ್ಮಣ್ಣನ್ನೇ ತುಟಿಗೂ ಬಳಿದುಕೊಳ್ಳುತ್ತೀರೋ ಏನೋ ಭಗವಂತನಿಗೆ ಗೊತ್ತು! ವೆಂಕಜ್ಜೀಗೆ ಇದರ ಸೂಕ್ಷ್ಮ ಗೊತ್ತಾಗದೇ ಇದ್ದುದು ನನ್ನ ಪುಣ್ಯ! ಅವಳ ಹೆಸರಲ್ಲಿ ನಾಲೆ ಕೆಳಗಿನ ನಾಲ್ಕೆಕರೆ ತರೀ ಜಮೀನಿದೆ. ಅದನ್ನು ನನಗೇ ಕೊಡುತ್ತಾಳೆಂಬ ಭರವಸೆ ಇದೆ. ನಾನು ನಿನಗೇ ಅದನ್ನು ಕೊಡಬೇಕೆಂದಿದ್ದೇನೆ. ವೆಂಕಜ್ಜಿ ಮನಸ್ಸು ನೋಯಿಸಿ ಅದನ್ನು ಕಳಕೊಳ್ಳಬಾರದು ಹುಷಾರಾಗಿರು. ಈಗಿನ ಕಾಲದ ಹುಡುಗೀರಿಗೆ ಮುಂದಕ್ಕೆ ಏನು ಉಪಯೋಗ ಅನ್ನೋದೇ ತಿಳಿಯುಲ್ಲ! ಮುಂದಿನ ಶನಿವಾರ ಖಂಡಿತ ಹೋಗಿ ನಮಸ್ಕಾರ ಮಾಡಿ ಅವಳು ಹೇಳಿದ ಕತೆಯನ್ನೆಲ್ಲಾ ಕೇಳಿಕೊಂಡು ಬಾ" ಎಂದು ಬರೆದಿದ್ದಳು.

-ನಾಲ್ಕೆಕರೆ ಜಮೀನು ತಿರುಗಿ ಶನಿವಾರ ಸಿದ್ದೀಕಟ್ಟೇಗೆ ಕೊಂಡೊಯ್ದಿತು ನನ್ನ.

ಯಥಾಪ್ರಕಾರ ವೆಂಕಜ್ಜಿ ಗೆಜ್ಜೆವಸ್ತ್ರ ಮಾಡುತ್ತಾ ಇದ್ದಳು. ಹೋದವಳೇ ಅವಳ ಕಾಲು ಮುಟ್ಟಿ ನಮಸ್ಕಾರ ಮಾಡಿದೆ. "ಎಂಟು ಮಕ್ಕಳ ತಾಯಿಯಾಗಿ ಬಾಳಿಕೊಂಡಿರಮ್ಮ" ಎಂದು ಆಶೀರ್ವಾದ ಮಾಡಿದಳು. ಈಗಿನ ಕಠಿಣಕಾಲದಲ್ಲಿ ಗಂಡನ್ನ ಸಾಕೋದೇ ಮಹಾ ಪ್ರಯಾಸ. ಹಾಗಿರುವಾಗ ಇನ್ನು ಎಂಟು ಮಕ್ಕಳನ್ನ? ದೇವರೇಗತಿ! ಅನಾಥಾಲಯವೇ ಗತಿ! ಭಿಕ್ಷುಕರ ಕಾಲೋನಿಯೇ ಗತಿ ಎಂದಂದುಕೊಳ್ಳುತ್ತಿದ್ದಾಗಲೇ ವೆಂಕಜ್ಜಿ ಶುರುಮಾಡಿದಳು.

"ಸಾತಕ್ಕ ನಿನ್ನ ವಯಸ್ಸಿನಲ್ಲಿ ನಿನ್ನ ಹಾಗೇ ಇದ್ದಳು. ಸೊಂಟದಲ್ಲೊಂದು, ಕೈನಲ್ಲೊಂದು ಮಗೂನ ಕರೆದುಕೊಂಡು ಇಲ್ಲಿಗೆ ಬಂದಾಗ ನೋಡಿದರೆ ದೃಷ್ಟಿ ತಾಕುತ್ತೇನೋ ಎಂದು ಹೆದರಿ ನಾನು ಪೊರಕೆ ನಿವಾಳಿಸಿ ಮೂಲೇಲಿಟ್ಟು ಬೆಂಕಿಹಚ್ಚಿ ದೃಷ್ಟಿ ತೆಗೆಯುತ್ತಿದ್ದೆ. ನೀನು ಮಾತ್ರ ತೊಗಲಿನ ಚೀಲಾನ ಕೈಲಿ ಆಡಿಸುತ್ತಾ ಬರುತ್ತೀ" ಎಂದಳು.

ನಾಲ್ಕೆಕರೆ ಆಸೆ. "ಏನುಮಾಡಲಿ ವೆಂಕಜ್ಜೀ! ಬಂದ ಗಂಡುಗಳೆಲ್ಲಾ ಹುಡುಗೀಗೆ ಏನು ಸಂಪಾದನೆ, ಎಷ್ಟು ಆಸ್ತಿ ಇದೆ ಅಂತಲೇ ಕೇಳುತ್ತಾರೆ. ನಮ್ಮಪ್ಪನ ಆಸ್ತಿ ಗೊತ್ತಲ್ಲಾ! ಖಾಲಿ ನೆಶ್ಯದ ಡಬ್ಬಿ! ನನ್ನ ಸಂಪಾದನೆ, ಓದುಮುಗಿಯುಕ್ಕೆ

ಮುಂಚೇನೇ ಹೇಗಾಗುತ್ತವ್ಮಾ! ಅದಕ್ಕೇನೆ ಓದಿ ಕೆಲಸ ಸಂಪಾದಿಸಿ, ಸಂಸಾರ ಮಾಡುಕ್ಕೆ ಹಣಸಾಕು ಅಂದಾಗ ಒಂದು ಗಂಡಸ್ನ ಹಿಡಿದು ಮದುವೆ ಮಾಡಿಕೊಳ್ಳೋಣ ಅಂತಿದೀನಿ" ಎಂದೆ.

ವೆಂಕಜ್ಜಿ ಇದನ್ನು ಮೆಚ್ಚಿದಳು. "ಹಾಗೇಮಾಡು ಲೀಲಾ ನೀನು ಜಾಣ ಹುಡುಗೀನಮ್ಮ ನಿಮ್ಮಮ್ಮನಿಗೆ ನನ್ನದೆ ಅಂತಿದ್ದ ನಾಲ್ಕೆಕರೆ ಜಮೀನನ್ನು ಕೊಡೋಣ ಅಂತಿದ್ದೆ. ಅವಳು ಅದನ್ನು ಒಬ್ಬಳೇ ಮಗಳು, ಸ್ತ್ರೀಧನ ಅಂತ ನಿನಗೆ ಕೊಡ್ತಾಳೆ ಅಂತಲೂ ಗೊತ್ತಿತ್ತು. ಅದರ ಆಶೆಗೆ ಯಾರಾದರೂ ನಿನ್ನ ಮದುವೆ ಮಾಡಿಕೋತಾರೇನೋ ಅಂತ ಶಂಕೆ ಬಂತು. ಅದಕ್ಕೋಸ್ಕರ ನಾಲ್ಕೆಕರೇನ ಸಿದ್ದೀಕಟ್ಟೆಯ ಅಶ್ವತ್ಥನಿಲಯಕ್ಕೆ ದಾನಪತ್ರ ಬರೆದುಕೊಟ್ಟುಬಿಟ್ಟೆ ಎಂದು ಹೇಳಿದಳು.

ಸರಿ! ಅಂತ ಹೇಳಿ ಸರಸರ ಅಂತ ಹಾಸ್ಟಲಿಗೆ ಹಿಂತಿರುಗಿದೆ ಅಮ್ಮನಿಗೂ ಕಾಗದ ಬರೆದು ಹಾಕಿದೆ.

ಅಮ್ಮ ಕೂಡಲೇ ಜವಾಬು ಬರೆದಳು. 'ವೆಂಕಜ್ಜೀಗೆ ಅರವತ್ತು ಆದಾಗಿನಿಂದ ಅರಳು ಮರಳು ಗೆಜ್ಜೆಸ್ತ್ರಾನೆಲ್ಲಾ ಅರಳೀಕಟ್ಟೆಗೇ ಕಟ್ಟಲಿ. ನೀನು ಇನ್ನುಮೇಲೆ ಅಲ್ಲಿಗೆ ಶನಿವಾರ ಶನಿವಾರ ಹೋಗಿ ಬುದ್ಧಿ ಕೆಡಿಸಿಕೋಬೇಡ-ಹಾಸ್ಟೆಲಿನಲ್ಲೇ ಇದ್ದು ಚೆನ್ನಾಗಿ ಓದಿಕೊಂಡು ಫಸ್ಟ್‌ಕ್ಲಾಸಿನಲ್ಲಿ ಪ್ಯಾಸುಮಾಡು, ಸಿದ್ದೀಕಟ್ಟೆ ಅಂತ ನೆಪ ಮಾಡಿಕೊಂಡು ಮಾರ್ಕೆಟಿಲ್ಲಾ ಸುತ್ತುಕ್ಕೆ ಹೋಗಬೇಡ' ಇತ್ಯಾದಿ ಇತ್ಯಾದಿ ಲೊಟ್ಟೆ ಲೊಸಕು ಬುದ್ಧಿವಾದ ಎಲ್ಲಾ ಬರೆದಿದ್ದಳು.

ಓದಿದಮೇಲೆ "ಅವಾಕಾ" ನೋಡುಕ್ಕೆ ಹೋದೆ.

—ಶ್ರೀಮತಿ ಲೀಲ.

ದೀವಳಿಗೆ ಹಬ್ಬಕ್ಕೆ ಮುತ್ತಿನಾ ಸರ ತಂದ!
ಆದರೂ, ಆಕೆಗೇ ಬಲು ಸಿಡುಕು! ಕೋಪ!
ಏಕೆಂಬಿರೊ! ಪಾಪ! ಆತ ಕೊಟ್ಟಾ 'ಮುತ್ತು'
ಇಮಿಟೇಷನೆಂಬುದೇ, ಹುಡುಗಿಯಾ ಗೋಳು!

* * *

ಆದಷ್ಟು ಕೇಸುಗಳ ಕೋರ್ಟಿನಾಚೆಯೆ, ಜನರು
ಇತ್ಯರ್ಥಮಾಡಿದರೆ, ಕ್ಷೇಮವೆಂದರು, ಖಟ್ಜು!
ಚೂರಿ, ದೊಣ್ಣೆಗಳಿಂದ ಅದನೆ ಮಾಳ್ಪರು, ಜನರು!
ಆದರೂ, ಪೋಲೀಸರೊಪ್ಪರಲ್ಲಾ?

ಕಟ್ಟೆಯೊಡೆದ ದಿನ

(ಥರ್ಬರನ ಅನುಕರಣೆ)

ಇದಾದುದು ಹೋದವರ್ಷ. ಮೈಸೂರು ಸಂಸ್ಥಾನದ ಮರಿ ವಿಶ್ವೇಶ್ವರಯ್ಯಗಳು ಕಟ್ಟಿದ ಕೆರೆಗಳು ಡಲೆಸರ ಯೋಜನೆಗಳಂತೆ ಫಟಫಟಾಂತ ಬಿರುಕುಬಿಟ್ಟು, ನಮ್ಮೂರಿನ ಮರಿಕೋಸೀ ನದಿಗಳು ಉಕ್ಕಿಬಂದು ಮೈಸೂರಿನ ಬೆಂಗಾಡುಜಿಲ್ಲೆ ಚಿತ್ರದುರ್ಗವೂ ಒಂದು ಮಿನಿಯೇಚರ್ ಅಸ್ಸಾಂ ಅಥವಾ ಬಿಹಾರವಾಗಿದ್ದ ಕಾಲದಲ್ಲಿ ಸಂಗೇನಹಳ್ಳಿ ಕೆರೆಯನ್ನು ಜಿನಗಿಹಳ್ಳಿ ನುಂಗಿದ ಮರುದಿನ. ತುಪ್ಪದಹಳ್ಳಿ ಕೆರೆಯ ಇಂಜಿನಿಯರುಗಳು ಬೆಪ್ಪಾದ ದಿನದ ಹಿಂದಿನ ದಿನ.

ಆ ದಿನ ನಮ್ಮೂರಿನಲ್ಲಿ ಹಾಲಾಹಲ ಉದ್ಭವಿಸಿದಷ್ಟು ಕೋಲಾಹಲವೆದ್ದಿತು. ದೊಡ್ಡಕೆರೆ ಒಡೆಯಿತು ಎಂಬ ಸುದ್ದಿ ಬಂತು. ಆ ಕೆರೆಗೆ ಮೂರುಮೈಲೀ ದೂರದಲ್ಲಿ, ಅದರ ಕೋಡೀಹಳ್ಳದ, ದಡದಲ್ಲಿ, ನಮ್ಮೂರು, ಬ್ರಹ್ಮಪುತ್ರಾ ನದೀದಡದಲ್ಲಿ ದಿಬ್ರೂಘರ್ ಇದ್ದ ಹಾಗಿದೆ. ನಾಲ್ಕುದಿನಗಳಿಂದಲೂ ಹಿಡಿದಮಳೆ ಬಿಟ್ಟಿರಲಿಲ್ಲ. ಕೋಡಿಯ ಹಳ್ಳ ಉಕ್ಕಿ ಭೋರ್ಗರೆಯುತ್ತಿತ್ತು. ಇದ್ದಕ್ಕಿದ್ದಂತೆಯೇ ಸೂರ್ಯನ ಸ್ವಚ್ಛವಾದ ಬಿಸಿಲು ಬಿದ್ದಿತು; ಮಳೆಯೇನು ನಿಲ್ಲಲಿಲ್ಲ. ಮೋತ್ನೈಟಂಗನ ಮಗಳಿಗೂ ಡಲೆಸನ ಜ್ಯೇಷ್ಠಪುತ್ರನಿಗೂ, ಮಲೆಂಕೋವನ ಮಗಳಿಗೂ, ಐಕನ ಪುತ್ರನಿಗೂ ಒಂದೇ ಮಾತಿನಲ್ಲಿ ಹೇಳುವುದಾದರೆ ನಾಯಿಗೂ ನರಿಗೂ, ತೋಳನಿಗೂ ಕುರಿಗೂ ಮದುವೆಯಾಗುವ ಸುಮುಹೂರ್ತ. ಬಿಸಿಲುಮಳೆ. ಕಾಮನಬಿಲ್ಲು. ಹಸಿರೆಲೆಯ ಮರಗಳು. ಆಕಾಶದಲ್ಲಿ ಮಹಾಮೇಘ. ಗುಡುಗು. ಅದರಹಿಂದೆಯೇ ಗುಡುಗಿನಂತಹವಾರ್ತೆ. 'ಒಡೆಯಿತು ಕೆರೆ' ಎಂದು ಗುಂಡಪ್ಪ ಕೂಗಿದ. ಶೆಟ್ಟಿ 'ಒಡೆಯಿತು' ಎಂದ. 'ಬಂತುನೀರು' ಎಂದ ಪಿಂಜಾರ ಬುಡ್ಡ. 'ಕೊಚ್ಚಿತು ಊರು' ಎಂದ ಜಂಬಯ್ಯ 'ಹೋ' ಎಂದರು ಜನರೆಲ್ಲ. 'ಬಂತು ನೀರು' 'ಕೀಳು ಕಾಲು' 'ಕಾಲು ಕೀಳು' 'ಎಮ್ಮೆ ಹಟ್ಟಿಕಡೆ ಓಡು' 'ದೊಗ್ಗನಾಳಿಗೆ' ಸಹಸ್ರಕಂಠಗಳು ಒರಲಿದವು. ಕೊನೆಗೆಲ್ಲರೂ 'ಬಂತು' 'ಬಂತು' ಎಂದರು, ಓಡಲಾರಂಭಿಸಿದರು. ಹಳ್ಳಿಯಹೆಂಗಸರು 'ತಿಮ್ಮಿ ಬಾರೇ' 'ಬೊಮ್ಮಿ ಬಾರೇ' ಎಂದು ಒರಲಿದರು. ಶಾಸ್ತ್ರಿಗಳ ಮುಖ ಭಯದಿಂದ ಕಪ್ಪಿಟ್ಟಿತು ರೋಮಾಂಚನವಾಯ್ತು. ಜನಿವಾರ ಸಾವರಿಸಿ, ಜುಟ್ಟು ನೇವರಿಸಿ 'ಬಂತು' ಎಂದು ಕೂಗಿದರು ಓಡಿದರು. ಮಳೆ ಚಚ್ಚುತ್ತಿತ್ತು. ಹಳ್ಳ ಹೆಚ್ಚುತಿತ್ತು.

ಶಾಲೆಯಲ್ಲಿ ಕುಳಿತಿದ್ದ ಹೆಡ್ಡಮಾಸ್ತರು ಸೀಮೆಸುಣ್ಣವನ್ನು ಹಿಡಿದೇ 'ಬಂತು ಬಂತು' ಎಂದು ಓಡಲಾರಂಭಿಸಿದರು. ದೆವ್ವದ ಕತೆಯನ್ನು ಹೇಳುತ್ತಿದ್ದ ಮಾರಲ್ ಮೇಷ್ಟರು ಅವರನ್ನು ಹಿಂಬಾಲಿಸಿದರು. 'ದೆವ್ವ ದೆವ್ವ' 'ಬಂತು ಬಂತು' ಎಂದು ಹುಡುಗರೂ ಓಡಿದರು.

ಪೋಲೀಸ್ ಠಾಣೆಯಲ್ಲಿ ಸ. ಇ. ಕೈಟಭ ಭಂಜನರು ಕುಳಿತಿದ್ದರು 'ಬಂತು' ಎಂದು ಬೆದರಿದ ಗಿಡಗನಂತೆ ಅವರು ಹೊರಕ್ಕೆ ಹಾರಿದರು. ದಫೇದಾರ್ ಮಧು ಸೂದನಯ್ಯ 'ಹುಲಿ' ಎಂದು ಕೂಗಿ ಕುಪ್ಪಳಿಸಿದ ಕನಿಷ್ಠ ಬಿಲ್ಲೆಗಳು ಅವರ ಹಿಂದೇ ಕಾಲುಕಿತ್ತರು. ಮಳೇ ಹೆಚ್ಚಿತು. ಮಾನವರಮುಂದೆ ಏಳುಬೀಳುಗಳನ್ನು ಗಮನಿಸದೆ ಗುರಿಯತ್ತ ಸಾಗಿತು.

ಮನೆಯೊಳಗೆ ನೋಡಿದೆ. ನನ್ನ ಮಿತ್ರಸಂಕುಲವೆಲ್ಲಾ ಪಲಾಯನಸೂತ್ರ ಪಠಿಸಿತ್ತು. 'ಉತ್ತಿಷ್ಠತ ಜಾಗ್ರತ' ಎನ್ನುತ್ತಾ ನಾನೂ ಓಡಿದೆ. ಏನು ಓಟವದು. ಒಲಂಪಿಕ್ ರಿಲೇ ರೇಸಿನಲ್ಲೂ ಅಂತಹ ಓಟ ಕಾಣಿಸದು. ನನ್ನಮುಂದೆ ಮಾರ್‍ವಾಡಿ ಮಂಗೂಮಲ್ ಓಡುತ್ತಿದ್ದ. ಸಾವಿರರೂಪಾಯಿ ಬಂತೇನೋ ಎನ್ನುವಷ್ಟು ಸಂತೋಷ ದಿಂದ 'ಆಗಯಾ' ಎನ್ನುತ್ತಿದ್ದ ಅವನ ಬೊಜ್ಜು ಹೊಟ್ಟೆ ನಗಾರಿಯಂತೆ ಧಡ ಧಡಿಸುತ್ತಿತ್ತು. ನನ್ನ, ಅವನ ಮುಂದೆ ಡಾಕ್ಟರ್ ಜನರಾಯರು ಲೀಡ್‌ಕೊಟ್ಟು ಓಡುತ್ತಿದ್ದರು. 'ನೆವರ್‌ಸೇಡೈ' ಕುದುರೆ ಅವರಿಂದಲೇ ಓಟವನ್ನು ಕಲಿತು, ಈ ವರ್ಷ ಡರ್ಬಿ ಗೆದ್ದಿರಬೇಕು. ಕೃಶದೇಹ ಅವರದು. ಚಾರ್ ಆಂಖೆ ಅವರಿಗೆ ಒಂದು ಕಿವಿಯಿಂದ ಸ್ಟೆಕೋ ಸ್ಕೋಪ್ ಜೋತಾಡುತ್ತಿತ್ತು. ಅವರ ಹೊಸಾ ಹೊಸ ಉಲ್ಲನ್ ಸೂಟಿಗೆ ಮೂರುಮಣ ಮದರಿಂಡಿಯಾ ಮೆತ್ತಿತ್ತು. ಬಾಯಲ್ಲಿ ಕಚ್ಚಿದ ಸಿಗರೇಟು ಆರಿಹೋಗಿ ನೆನೆದು ತೊಪ್ಪೆಯಾಗಿದ್ದರೂ ಅದನ್ನವರು ಬಿಸುಟಿರಲಿಲ್ಲ. ಅದನ್ನು ಬಿಸುಟುವಷ್ಟರಲ್ಲಿ ಅದು ಬಂದುಬಿಟ್ಟರೆ? ನಾನು 'ಸಾರ್' ಎಂದ. 'ಏನದು ಬಂತು ಬಂತು' ಅಂತಾರಲ್ಲಾ? ಎಂದವರು ಕೇಳಿ ಮತ್ತೆ ಮ್ಯಾರಥಾನ್ ರೇಸಿಗೆ ಆರಂಭಿ ಸಿದರು. 'ನೀರು, ಕೆರೆ ಒಡೆದಿದೆ ಭೋರ್ಗರೆಯುವ ಶಬ್ದ' ಎಂದೆ. ನಿಜವಾಗಿಯೂ ಭೋರ್ಗರೆಯುವ ಶಬ್ದ ಹೆಚ್ಚಿತು ಜೀವದಾಸೆ ಹಾರಿತು. ನನ್ನ ಹಿಂದೆ ಮೂರ್ತಿ ಓಡಿಬಂದ. ಕೈಯಲ್ಲಿ ಶೃತಿಪೆಟ್ಟಿಗೆ ಇತ್ತು ಅವನು ಸಂಗೀತ ಪ್ರಿಯ. ಪೆಟ್ಟಿಗೆಯನ್ನು ಬಾರಿಸುತ್ತ 'ಓಡೂರು ಜಾನವಾಲೇ' ಎಂದು ಹಾಡುತ್ತಿದ್ದ. ನಾವೆಲ್ಲರೂ ಇನ್ನೂ ಜೋರಾಗಿ ಓಡಿದೆವು. ಮೂರ್ತಿ 'ಬಂತೂ' ಎಂದು ಕೂಗಿ ತಿದಿಯನ್ನೊತ್ತಿದ. ಭೋರ್ಗರೆದಿತು. ಡಾಕ್ಟರ್ ಜವಾರಾಯರು 'ಅಯ್ಯೋ ಬಂದೇ ಬಿಡ್ತು' ಎಂದು ನಿರ್ವಿಣ್ಣರಾಗಿ ಬಿದ್ದುಬಿಟ್ಟರು. ಸೇಟ್ ಬಿದ್ದು 'ಅರೇ ವೈ ಮರ್‌ಗಯಾ' ಎಂದ ನನ್ನ ಓಟದವೇಗ ತಗ್ಗಿತು ಮೂರ್ತಿ ಶ್ರುತಿಪೆಟ್ಟಿಗೆ ಬಾರಿಸುತ್ತಾ ಓಟದಲ್ಲಿ ಗೆದ್ದು ಮುಂದಕ್ಕೋಡಿದ. ಅವನು ನಿಮಿಷದಲ್ಲೇ ಒಂದು ಫರ್ಲಾಂಗ್ ಮುಂದುವರಿದ


ಅವನು ಹೋದಂತೆಲ್ಲಾ ಘೋರ್ಗರೆತ ಕಡಮೆಯಾಯ್ತು. ಮಳೆ ನಿಂತಿತು. ನಿಮಿಷ ದಲ್ಲಿ ನೆಲಕಾಣಿಸಿತು. ಆಕಾಶ ನಿರ್ಮಲವಾಯ್ತು.

'ಕೆರೆ ಒಡೆದಿಲ್ಲ' ಎಂದು ನಾನು ಕೂಗಿದೆ. ಯಾರೂ ಕೇಳಲಿಲ್ಲ ಎಲ್ಲರೂ ಊರಿಗೆ ಹಿಂತಿರುಗಿದರು. ಮರುದಿನ ಯಾರೂ ಕೆರೆಯೊಡೆದ ಸುದ್ದಿಯನ್ನು ಮಾತಾಡ ಲಿಲ್ಲ ಗುಂಡಪ್ಪ ಕೈಟಭ ಭಂಜನ, ಹೆಡ್ಡಮಾಸ್ತರು, ಕೆರೆಒಡೆದ ಸುದ್ದಿಬೇಡ, ಕೆರೆ ಎಂದರೇ ರೇಗುತ್ತಿದ್ದರು. ಜವರಾಯರಿಗೆ ನನ್ನನ್ನೂ ಮೂರ್ತಿಯನ್ನು ಕಂಡರೆ ಸಾಕು ಕಾಲ್ನಡುಕ ದೂರದಲ್ಲೇ ನಾವು ಬರುವುದನ್ನು ನೋಡಿ ಅಡ್ಡದಾರಿ ಹಿಡಿಯು ತ್ತಿದ್ದಾರೆ.

ಈ ವರ್ಷ ವಿಶ್ವದಾದ್ಯಂತವೂ ವಿಕಟಿಸಿರುವ ಯೂಫ್ರೆಟಿಸ್, ಡಾನ್ಯೂಬ್, ಕೋಸೀ, ಗಂಡಕೀ, ಬ್ರಹ್ಮಪುತ್ರಾ ಮೊದಲಾದ ನದಿಗಳ ಪ್ರವಾಹದ ಸುದ್ದಿಯನ್ನು ನಮ್ಮೂರಲ್ಲಿ ಯಾರೂ ಓದುತ್ತಿಲ್ಲ. ಓದಿದವರಾರೂ ನಂಬುತ್ತಿಲ್ಲ. ಪ್ರವಾಹ ಪರಿ ಹಾರ ನಿಧಿಗೆ ನಮ್ಮೂರಿನಿಂದ ಒಂದು ಕುರುಡು ಕಾಸೂ ಹೋಗುತ್ತಿಲ್ಲ.

ಮೊನ್ನೆ ನಮ್ಮೂರ ಆಸ್ಪತ್ರೆಯ ಬಳಿಗೆ ಹೋದೆ. ಆಸ್ಪತ್ರೆಯ ಅಂಗಳದಲ್ಲಿ ಜವರಾಯರು ಓಡಾಡುತ್ತಿದ್ದರು ನಾನು ಮೆಲ್ಲನೆ ಅವರ ಹಿಂದೆ ಹೋಗಿ ನಿಂತು 'ಬಂತು, ಬಂತು' ಎಂದೆ. ಜವರಾಯರು ರೋಷ ಸಂತಪ್ತ ನಯನಗಳನ್ನು ನನ್ನ ಕಡೆ ಹೊರಳಿಸಿ, ಕೆಳಕ್ಕೆ ಬಾಗಿ ಕಲ್ಲೊಂದನ್ನು ಕೈಗೆ ತೆಗೆದುಕೊಂಡರು. ನಾನು ಓಡಿಹೋಗಿ ಪ್ರಾಣ ಉಳಿಸಿಕೊಂಡೆ.

— ಅ. ರಾ. ಸೇ.



ಚಿರಂಜೀವಿ ಪರವಾಗಿಲ್ಲ ಕಣೇ! ಪುಸ್ತಕ ಹರಿಯೋದು ನೋಡಿದರೆ ನವ್ಯಕವಿ ಆಗೇ ಆಗ್ತಾನೆ!

ವಿನಯ ವಾರ

ಕೈಗೆ ಬರುವ ನೂರೈವತ್ತು, ಹದಿನೈದನೇ ತಾರೀಖಿನೊಳಗೇ ಮಂಗಮಾಯ ವಾಗಿ ಹೋಗಿತ್ತು. ತಿಂಗಳಿನ ಉತ್ತರಾರ್ಧವನ್ನು ತಟಾಯಿಸಲು ರಾಜಣ್ಣ, ಮಾವ ನಿಗೆ ಕಾಗದ ಬರೆದಿದ್ದ "ಮೀನಾಕ್ಷಿಗೆ ಮೈಯಲ್ಲಿ ಚೆನ್ನಾಗಿಲ್ಲವೆಂದು ಬೇರೆ ಬರೆದಿದ್ದೆ, ಆದರೂ ಟಿ. ಎಂ ಓ. ಏನೂ ಬರಲಿಲ್ಲ" ಎಂದು ಯೋಚನೆ ಅವನಿಗೆ. ಆದ್ದರಿಂದಲೇ ಅವನು ಬೆಳಗ್ಗೆದ್ದು ಅಂಚೆ ಕಚೇರಿಗೆ ನಡೆದ; ವಿಚಾರಿಸಿಕೊಂಡು ಬರೋಣ ಅಂತ

ಅಂಚೆ ಕಚೇರಿಯ ವರಾಂಡದಲ್ಲಿ ಕಾಲಿಟ್ಟಕೂಡಲೇ ಅವನ ಕಣ್ಣನ್ನು ಕುಕ್ಕಿದ್ದು ಒಂದು ಹೊಸ ಪೋಸ್ಟರು. 'ರಾಷ್ಟ್ರೀಯ ಯೋಜನಾ ಸಾಲದ ಸರ್ಟಿ ಫಿಕೇಟು ಕೊಳ್ಳಿ, ಕಾಗದಗಳಿಗೆ ಸರಿಯಾದ ಅಡ್ರೆಸ್ಸು ಬರೆಯಿರಿ, ಅವುಗಳಮೇಲೆ ಇಂಥಲ್ಲಿ ಚೀಟಿ ಅಂಟಿಸಿ, ಇಂಥಲ್ಲಿ ಅಂಟಿಸಬೇಡಿ, ಸಮಯಕ್ಕೆ ಸರಿಯಾಗಿ ಪೋಸ್ಟ್ ಮಾಡಿ' ಎಂದೆಲ್ಲಾ ಅರಚುವ ಮಾಮೂಲಿನ ಶೃಂಗಾರಗಳೊಡನೆ 'ವಿನಯ ವಾರ' 'ತಾ|| ೨೩ರಿಂದ ೨೯ರವರೆಗೆ' ಎಂಬ ಹಾಳೆಯೊಂದು ವೈಚಾಚಿ ನಿಂತು ಅಣಕಿಸು ತ್ತಿತ್ತು. ರಾಜಣ್ಣ ಅದನ್ನು ಕಂಡವನೇ 'ಓಹೋ ವಿನಯವಾರವೇ?" ಎಂದು ಕೊಂಚ ಗಟ್ಟಿಯಾಗಿಯೇ ಸ್ವಗತವನ್ನು ಸಾರಿದ. ಅದು ಒಳಗಡೆ ಕಿಟಿಕಿಯ ಹಿಂದೆ ಕುಳಿತಿದ್ದ ಅಂಚೆ ಗುಮಾಸ್ತನ ಕಿವಿಗೆ ಬೀಳಲು ಆತ "ಗುಡ್‌ಮಾರ್ನಿಂಗ್ ಸರ್.... courtesy weekಉ" ಎಂದು ಹಲ್ಲು ಕಿರಿದ.

ರಾಜಣ್ಣ, ಎಂದಿಲ್ಲದ ಈ ನಗುಮುಖವನ್ನು ಕಂಡು ಬೆರಗಾದರೂ, "ಓಹೋ courtesy weekಏ! .. ಪರವಾಗಿಲ್ಲ, ಒಂದು ವಾರವಾದರೂ ವಿನೀತರಾಗಿರ್ತೀ ರಲ್ಲ ಸಾಕು" ಎಂದು ಕೊಂಕಿದ.

"ಹಾಗಲ್ಲ ಸಾರ್, ಒಂದುವಾರ ಮಾತ್ರ ವಿನಯವಾಗಿರೋದಲ್ಲ, ವರ್ಷವೆಲ್ಲ ಹಾಗೆಯೇ!"

"ಮತ್ತೆ ಇದೇನು ಬಂತು! ಈ ವಾರ ಮಾತ್ರ ವಿನಯವಾರ ಅಂತ ಚೀಟಿ ಅಂಟಿಸ್ಕೊಂಡಿದೀರಿ!"

"ಒಳಗಡೆ ಬನ್ನಿ; ಆ ಸಮಾಚಾರವೆಲ್ಲ ಹೇಳ್ತೀವಿ. ಬನ್ನಿ ಸಾರ್"

ರಾಜಣ್ಣ ಅವಾಕ್ಕಾದ. ಆದರೂ ಬಿಡಲಿಲ್ಲ. "ಬಾಗಿಲಲ್ಲಿ No admission ಅಂತ ಹಾಕ್ಕೊಂಡು, ಸ್ವಾಗತಾನೆ?" ಎಂದು ಕೇಳಿದ.

"ಪರವಾಗಿಲ್ಲ ಬನ್ನಿ ಸಾರ್" ಅಂದಮೇಲೆ, ಇದೇನೋ ಪ್ರಳಯಕ್ಕೆ ಬಂತು ಎಂದುಕೊಂಡು ರಾಜಣ್ಣ ಒಳಗೆ ನುಗ್ಗಿದ. ಒಳಗಡೆ ಪೋಸ್ಟ್‌ಮೇಸ್ಟರ ಮುಂದೆ ಪೀಠ ಬೇರೆ ಹಾಕಿತ್ತು. 'ಗುಡ್‌ಮಾರ್ನಿಂಗ್' ಆದಮೇಲೆ ಆತ ಚೇತರಿಸಿಕೊಳ್ಳು ವುದರೊಳಗೇನೇ ಪೋಸ್ಟ್‌ಮೇಸ್ಟರು ವಿನಯವಾರದ ಮಹತ್ವವನ್ನೆಲ್ಲ ಪಾಠ ಒಪ್ಪಿಸಿ ದಂತೆ, ಒಳ್ಳೆಯ ಬಿನ್ನಾಣದಿಂದ ಹೇಳಿ ಮುಗಿಸಿದ. ರಾಜಣ್ಣ ತನ್ನ ಕಿವಿಗಳನ್ನು ತಾನೇ ನಂಬಲಾರದಾದ. ಏನನ್ನ ಬೇಕೆಂದು ತಿಳಿಯಲಿಲ್ಲ. "ತಮಗೆ ಇಷ್ಟೊಂದು ಸವಿಯಾಗಿ ಮಾತನಾಡೋಕೆ ಬರುತ್ತೇಂತ ನನಗೆ ತಿಳಿದೇ ಇರಲಿಲ್ಲ" ಎಂದಷ್ಟೇ ಹೇಳಿದ. ಆದರೆ ಇವನ ಕೊಂಕು ಅವರಿಗೆ ಅರ್ಥವಾಯಿತೋ ಇಲ್ಲವೋ. ಅಂತೂ ವಿನಯದ ಧಾಳಿ ಅಷ್ಟಕ್ಕೇ ನಿಲ್ಲಲಿಲ್ಲ. ರಾಜಣ್ಣನನ್ನು ಆಫೀಸಿನ ಒಳಗೆಲ್ಲಾ ಸುತ್ತಾಡಿಸಿದರು. ಇಲಾಖೆಯ ಬೇರೆ ಬೇರೆ ಕಾರ್ಯವಿಧಾನಗಳನ್ನು ವರ್ಣಿಸಿ ವಿವರಿಸಿದರು. ಪೋಸ್ಟ್‌ಮಾಡಿದ ಕಾಗದ ಬೇರೆ ಬೇರೆ ಮೂರು ಸತ್ತ ಕಾಗದಗಳ ಕಚೇರಿಗಳಿಗೆ ಹೋಗಿ ಬರಲು ಏನೇನು ಮಾಡಬೇಕೆಂಬುದರಿಂದ ತೊಡಗಿ, ತಂತಿಗಳು ಕಾಗದಗಳಿಗಿಂತಲೂ ನಿಧಾನವಾಗಿ ಹೋಗಬೇಕಾದರೆ ಯಾವರೀತಿ ವಿಳಾಸ ಬರೆಯ ಬೇಕೆಂಬುದರವರೆಗೆ ನಾನಾ ವಿಷಯಗಳನ್ನು ಮುಂದಟ್ಟಾಗುವಂತೆ ಹೇಳಿದರು. ರಾಜಣ್ಣನೂ ಬಿಡಲಿಲ್ಲ ತಾನೂ ಆಸಕ್ತಿ ವಹಿಸಿ, "ಬೇರಿಂಗ್ ಕಾಗದಗಳು ಬಂದರೆ, ನವಕಲು ಕಾಸು ಕೊಟ್ಟರೆ ಸಾಕೆ? ಸ್ನೇಹಿತರಿಗೆ ಲಗ್ನವಾದಾಗ (ಕೆಲವು ಸಂದರ್ಭಗಳ ಲ್ಲಾದರೂ) Heartfelt condolences ಎಂದು ಅನುತಾಪ ಸೂಚಿಸುವ ತಾರು ಕೊಟ್ಟರೆ ಶಿಕ್ಷೆಯೇನಾದರೂ ಇದೆಯೆ? ರೇಡಿಯೊ ಲೈಸನ್ಸನ್ನು ಇಲಿ ಕತ್ತರಿಸಿದರೆ ಅದಕ್ಕೆ ಜುಲುಮಾನೆ ಎಷ್ಟು? ಏಪ್ರಿಲ್ ಒಂದನೆ ತಾರೀಖಿಗೆ ಮೂರ್ಖರ ದಿನಾಚರಣೆ ಗಾಗಿ ಜೀವಂತ ಮಂಡೂಕಗಳನ್ನು ಪಾರ್ಸೆಲ್‌ಮಾಡಿದರೆ ದರದಲ್ಲಿ ರಿಯಾಯತಿ ಇದೆಯೇ? ಬಾಟ್ಲಿಯಲ್ಲಿ ತುಂಬಿದ ಆ ಜಂತು, ವಿಳಾಸವನ್ನು ತಲಪಿದಾಗ ಹರೋ ಹರ ಆಗಿದ್ದರೆ ಪರಿಹಾರವೇನಾದರೂ ಇದೆಯೇ? ಎಂದು ಮುಂತಾಗಿ ಪ್ರಶ್ನೆಗಳನ್ನು ಹಾಕಿದ. ಅಂಚೆಯವರು ಅದಕ್ಕೆಲ್ಲ ಶಕ್ತ್ಯಾನುಸಾರ ಹಲ್ಲು ಕಿರಿದೇ ಉತ್ತರಿಸಿದರು. ಆದರೆ ರಾಜಣ್ಣನ ಕೊನೆಯದೊಂದು ಪ್ರಶ್ನೆಗೆ ಮಾತ್ರ ಅವರು ಕಕ್ಕಾಬಿಕ್ಕಿಯಾದರು. ಈತ 'ಪಿತರ್‌ಲ್ಯಾಂಡಿಗೆ ಏರ್‌ಮೈಲಿದೆಯೇ, ಛಾರ್ಜು ಎಷ್ಟು?" ಎಂದು ಪ್ರಾಮಾ ಣಿಕವಾಗಿ ಕೇಳಿದಾಗ, ಅವರೆಲ್ಲ ದಪ್ಪ ದಪ್ಪ ಕಡತಗಳನ್ನು ತಂದು ಹಾಳೆಗಳನ್ನು ತಿರುವಿ ಮಾಹಿತಿಕೊಡಲು ಪ್ರಯತ್ನಿಸಿದರು. ಅವರಲ್ಲೊಬ್ಬ ನಿರಾಶನಾಗಿ "ಅಂಥಾ ಹೆಸರಿನ ದೇಶವೇ ಇಲ್ಲ" ಎಂದು ವಿನಯವನ್ನು ಮರೆತು ಹೇಳೇಬಿಟ್ಟ. ಆಗ ರಾಜಣ್ಣ "ಛೆ, ಛೆ, ಇಲ್ಲದೇ ಇರೋದುಂಟೆ! ನಮ್ಮಜ್ಜ ಅಲ್ಲಿದಾರೆ" ಎಂದ. ಪೋಸ್ಟ್‌ಮೇಸ್ಟರು ಒಡಕು ನುಡಿದ ಆ ಕಿರಿ ಗುಮಾಸ್ತೆಯನ್ನು ಗದರಿಸಿ ರಾಜಣ್ಣ

ನೊಡನೆ ಅತಿ ವಿನಯದಿಂದ "ತಾವು ಹೇಳೋದು ಯುಗೋಸ್ಲಾವಿಯಾ ಅಂತ ಕಾಣುತ್ತೆ; ಅಲ್ಲಿ ಮೊದಲು ಪೀಟರ್ ಎಂಬ ಧೊರೆ ಆಳ್ತಾ ಇದ್ದಿದ್ರಿಂದ ಆ ದೇಶವನ್ನು ಪೀಟರ್‌ಲ್ಯಾಂಡ್ ಅಥವಾ ಪಿತರ್‌ಲ್ಯಾಂಡ್ ಎಂತ ಕರೀತಾರೋ ಏನೊ" ಎಂದು ತನ್ನ ಚಾರಿತ್ರಿಕ ಸಂಶೋಧನೆಯನ್ನು ಮಂಡಿಸಿದ. ಅಷ್ಟರಲ್ಲಿ ಮತ್ತೊಬ್ಬ ಚೂಟಿ ಗುಮಾಸ್ತೆ "ಸಿಕ್ತು ಸಿಕ್ತು ಸಾರ್" ಎಂದು ಕೈಯಲ್ಲಿದ್ದ ದಪ್ಪ ಪುಸ್ತಕವನ್ನ ಮುಚ್ಚಿದ. "ಪಿತರ್‌ಲ್ಯಾಂಡ್ – ಏರ್‌ಮೈಲ್ – ಅರ್ಧ ಔನ್ಸಿಗೆ ಒಂದೂಕಾಲು ರೂಪಾಯಿ ನ್ಯೂ ಫೌಂಡ್‌ಲ್ಯಾಂಡಿನದೇ ರೇಟು" ಎಂದುಬಿಟ್ಟು ಪಕ್ಕದವನ ಕಡೆಗೆ ಕಣ್ಣು ಮಿಟುಕಿಸಿದ. ದೊಡ್ಡದೊಂದು ಫಜೀತಿಯಿಂದ ಪಾರಾದ್ದಕ್ಕೆ ಎಲ್ಲರೂ ಹಿಗ್ಗಿದರು. ರಾಜಣ್ಣನಂತೂ ಮಾಹಿತಿ ಹುಡುಕಿಕೊಟ್ಟ ಗುಮಾಸ್ತೆಯ ಕೈ ಕುಲಿಕಿದ್ದೇ ಕುಲುಕಿದ್ದು! "ಪಿತರ್‌ಲ್ಯಾಂಡ್ ಎಂದರೆ ಯಮಪುರಿ – ಅಲ್ಲೇ ನಮ್ಮಜ್ಜ ಇರೋದು! ಅಲ್ಲಿಗೂ ಏರ್‌ಮೇಲ್ ಏರ್ಪಾಡಿದೆಯೆಂದು ಕಂಡು ಹಿಡಿದದ್ದು ಮಾತ್ರವಲ್ಲದೆ ರೇಟ್ ಕೂಡ ಹೇಳಿದರಲ್ಲ ತುಂಬ ಥ್ಯಾಂಕ್ಸ್ ತುಂಬ ಥ್ಯಾಂಕ್ಸ್" ಎಂದು ಅಭಿನಂದಿಸಿದ್ದೇ ಅಭಿನಂದಿಸಿದ್ದು!

ಇನ್ನು ಈತನನ್ನು ಒಳಗಿರಿಸಿಕೊಂಡರೆ ಸುಖವಿಲ್ಲವೆಂದು ಪೋಸ್ಟ್‌ಮೇಸ್ಟರು ಸಾಗಹಾಕುವ ಕಾರ್ಯಕ್ರಮಕ್ಕೆ ತೊಡಗಿದರು. ಪೀಠಿಕೆಯಾಗಿ "ತಾವು ಬಂದು ನಮ್ಮ ಇಲಾಖೆಯ ಕೆಲಸಗಳನ್ನು ಪರಿಶೀಲಿಸಿದ್ದು ತುಂಬ ಉಪಕಾರವಾಯಿತು. ನಮಗೆ ತಮ್ಮಂಥವರ ಸಹಾನುಭೂತಿ ಸದಾ ಬೇಕೇಬೇಕು – ಪ್ರೀತಿಯಿರಲಿ" ಎಂದು ಮುಂತಾಗಿ ಮುಕ್ತಾಯದ ವಿನಯವನ್ನೂ ಸುರಿಸಿದರು. ಇನ್ನೇನು ಹೊರಗೆ ದೂಡಿದ ಹಾಗೆ ಎಂದುಕೊಂಡ ರಾಜಣ್ಣ. ಅಷ್ಟರಲ್ಲಿ ಇದ್ದಕ್ಕಿದ್ದಹಾಗೆ ಪೋಸ್ಟ್‌ಮೇಸ್ಟರ ಕಣ್ಣಲ್ಲಿ ಹೊಳಪು ಮೂಡಿತು. ಪಕ್ಕದಲ್ಲಿ ನಿಂತಿದ್ದ ಒಬ್ಬ ಗುಮಾಸ್ತೇನ ಕಂಡು "ಮಿಸ್ಟರ್ ಶೇಷಾದ್ರಿ, ರಾಯರಿಗೆ ಹೆಲ್ತ್‌ಸೀಲ್ಸ್ ತೋರಿಸಲೇ ಇಲ್ಲವೆ? ತನ್ನಿ ತನ್ನಿ" ಎಂದರು. ಆ ನಿಮಿಷದಲ್ಲಿ, ತಾನು ಸಿಕ್ಕಿಕೊಂಡೆ ಎಂದು ತಿಳಿದುಹೋಯಿತು ರಾಜಣ್ಣನಿಗೆ. "ಪರವಾಗಿಲ್ಲ ಇನ್ನೊಂದುಸಲ ನೋಡ್ತೀನಿ, ನಿಮಗೆಲ್ಲಾ ತುಂಬ ಥ್ಯಾಂಕ್ಸ್, ನಿಮ್ಮ ವಿನಯವಾರ ಯಶಸ್ವಿಯಾಗಲಿ" ಎಂದು ದಡಬಡನೆ ಒದರಿ ಅಲ್ಲಿಂದ ಕಂಬಿ ಕೀಳುವುದರಲ್ಲಿದ್ದ. ಆದರೆ ಆ ಪೋಸ್ಟ್‌ಮೇಸ್ಟರು ಬಿಡುತ್ತಾನೆಯೆ? "ಇದನ್ನೆಲ್ಲಾ ನೋಡಿದಮೇಲೆ ಅದೊಂದು ನೋಡದೆ ಹೋದರೆ ನಮಗೆ ಸಮಾಧಾನವಿಲ್ಲ ಸಾರ್, ಕೊಂಚ ತಾಳಿ" ಎಂದು ನವನೀತದ ನುಡಿ ಹೊರಳಿಸಿದ. ಅಷ್ಟರಲ್ಲಿ ಹೆಲ್ತ್‌ಸೀಲುಗಳೂ ಬಂದೇ ಬಂದುವು "ನೋಡಿ, ಇವು ನಾಲ್ಕಾಣೆಯವು, ಇವು ರೂಪಾಯಿನವು" ಎಂದೆಲ್ಲಾ ತೋರಿಸಿದರು. ತಮ್ಮಂಥವರು ಇವನ್ನು ಕೊಂಡುಕೊಂಡು ದೇಶದ ಆರೋಗ್ಯ ಸುಧಾರಣೆಗೆ ನೆರವಾಗಬೇಕು" ಎಂದು ಹೇಳುತ್ತ ಹೇಳುತ್ತ ಎಗಡು ರೂಪಾಯಿನ ಸೀಲುಗಳನ್ನು ಹರಿದು ರಾಜಣ್ಣನ — ಯಾಂತ್ರಿಕವಾಗಿ ಒಲವಿಲ್ಲದೆ ಮೇಲೇಳುತ್ತಿದ್ದ — ಹಸ್ತದಲ್ಲಿ ತುರುಕಿಯೇಬಿಟ್ಟರು. ಒಂದು ನಿಮಿಷ ರಾಜಣ್ಣ

ಕುರಿಯುಂತಾದ. ಅಷ್ಟರಲ್ಲಿ ತಾನು ಯಾಕೆ ಅಂಚೆಕಚೇರಿಗೆ ಬಂದನೆಂಬುದು ಅವನಿಗೆ ಜ್ಞಾಪಕವಾಯಿತು. ಈ ವಿನಯದ ಬಿರುಗಾಳಿಯಲ್ಲಿ ಮಾವನ ಟಿ. ಎಂ. ಓ. ಸಮಾಚಾರ ಬುರುಡೆಯಿಂದ ಹಾರಿಯೇ ಹೋಗಿತ್ತು. ಆದರೂ ಕಷ್ಟಕಾಲಕ್ಕೆ ನೆನಪು ಬಂತು. "ನಾನು ಕ್ಯಾಷ್ ಏನೂ ತಂದಿಲ್ಲ ನೋಡಿ; ಟಿ. ಎಂ. ಓ. ಇದೆ ಯೇನೋ ಅಂತ ವಿಚಾರಿಸೋಕೆ ಬಂದೆ ಆದ್ದರಿಂದ ಈ ಸೀಲುಗಳು ಈವಾಗ ಬೇಡ, ನಾಳೆ ಕೊಂಡುಕೋತೀನಿ" ಎಂದು ಸೀಲುಗಳನ್ನು ಹಿಂದೆ ದಾಟಿಸುವುದಕ್ಕೆ ಪ್ರಯತ್ನಿಸಿದ. ಆ ಹೊತ್ತಿಗೆ ಎಲ್ಲಿ ಹೊಂಚುಹಾಕಿ ನಿಂತಿದ್ದನೋ ಆ ಪೋಸ್ಟ್‌ಮನ್ ಗಫೂರ್ "ಬಂದಿದೆ ಸಾರ್, ಬಂದಿದೆ ಸಾರ್ ಟಿ. ಎಂ. ಓ. ಎನ್ನುತ್ತ ಮನಿಯಾರ್ಡರ್ ಫಾರಮ್ಮನ್ನು ರಾಜಣ್ಣನಿಗೆ ಕೊಟ್ಟು ಕಾಸು ಎಣಿಸಿಯೇಬಿಟ್ಟ ಮಹರಾಯ. ಈ ಹೊತ್ತಿಗೆ ಯಾಕಾಗಿ ಬಂತಪ್ಪ ಅಂದೆನ್ನಿಸಿದರೂ ರಾಜಣ್ಣ ಸಂತೋಷ ನಟಿಸುತ್ತ "ಓಹೋ ಬಂದಿದೆಯೇನು!" ಎಂದುಬಿಟ್ಟು ಯಾರ ಮುಖವನ್ನೂ ನೋಡದೆ ಮನಿಯಾರ್ಡರಿಗೆ ರುಜು ಹಾಕಿ ಎರಡು ರೂಪಾಯಿನ ಹೆಲ್ತ್ ಸೀಲುಗಳನ್ನೂ ೭೦-೨ ರೂಪಾಯಿಗಳನ್ನೂ ಜೇಬಿಗೆ ತುರುಕಿಕೊಂಡು ಹೊರಟುಬಿಟ್ಟ. "Thank you Sir" ಎಂದು ಪೋಸ್ಟ್ ಮೇಷ್ಟರು ವಿನಯವಾಗಿಯೇ ಹೇಳಿದ. "Thank you -- Thank you" ಎನ್ನುತ್ತಾ ರಾಜಣ್ಣ ಅವಸರವಸರವಾಗಿ ಮನೆಕಡೆಗೆ ಧಾವಿಸಿದ. ಕೊನೆಗೂ ಕೊಟ್ಟರಲ್ಲ ಎರಡು ರೂಪಾಯಿಗೆ ಖಾರ ಎಂದು ಪಶ್ಚಾತ್ತಪಿಸುತ್ತಾ, ತಾನು ಹದಿನೈದುವರ್ಷದ ಹಿಂದಿನ ಹುಡುಗನಾಗಿರುವುದು ಸಾಧ್ಯವಿದ್ದಿದ್ದರೆ ಸಮಯ ಸಾಧಿಸಿ ಅವರ ವಿನಯ--ವಾರ'ದ ಪೋಸ್ಟರನ್ನು 'ವಿನಯ... ಖಾರ'ವೆಂದು ತಿದ್ದುತ್ತಿದ್ದೆನಲ್ಲ ಎಂದು ತಲೆ ತುರಿಸಿಕೊಂಡ.

— ರಾಮಕೃಷ್ಣ.

ಹಾದಿಯಲ್ಲಿ ಕೇಳಿಸಿದುದು

"ಹೌದ್ರೀ—ದಮ್ಮಿರಬೇಕ್ರೀ—ಮಾಡೀ ನೀವೂನೂ—ಯಾರುಬೇಡಾಂದ್ರು? ನಮಗೆ ದಮ್ಮಿತ್ತು-ನಾವು ಗಿಟ್ಟಿಸಿದೆವು ನಮ್ಮೇಲೆ ಯಾಕೆ ಉರಿದುಬೀಳ್ತೀರ? ನೀವೂ ಮಾಡಿ ಗಿಟ್ಟಿಸಿ–"

ಹೌದು ಆವರೆ ಹುಲಿಯನ್ನ ನೋಡಿ ನರೀ ಬರೇಹಾಕ್ಕೊಳ್ಳೊವಾಗ ಕಬ್ಬಿಣದ ಕಾವನ್ನು ಪರೀಕ್ಷೆಮಾಡಿದ್ದರೆ ಕ್ಷೇಮವಿತ್ತು—ಅಲ್ಲವೇ?

—ಕೇಫ.

ಸಂಗೀತೋಪತಿ

(ವೈಜ್ಞಾನಿಕ ಲೇಖನ.)

ಅಲ್ಲೋಪತಿ, ಹೋಮಿಯೋಪತಿಗಳನ್ನು ಎಲ್ಲರೂ ಕೇಳಿದ್ದೀರಿ; ಅವುಗಳ ಜತೆಗೆ ಈಚಿನ ಸಂಶೋಧನೆಗಳ ಫಲವಾಗಿ ಇನ್ನೊಂದು ವಿಚಿತ್ರಪತಿ ಸೇರಿಕೊಂಡಿದೆ–ಇದೂಸಹ ರೋಗಸಾಮ್ರಾಜ್ಯದಲ್ಲಿನ ಒಂದು ವಿರೋಧಿಪಕ್ಷ. ಆದರೆ ಇದರ ಚಟುವಟಿಕೆಗಳು ಸ್ವಾರಸ್ಯವಾಗಿವೆ, ಕೇಳಿ.

ಸಂಗೀತದ ವಿಚಾರವಾಗಿ–ಅಂದರೆ ಅದರ ಕಲಾಮಹಿಮೆಯನ್ನು ಕುರಿತು ಅನೇಕರು ಹಾಡಿದ್ದಾರೆ, ಗೀಚಿದ್ದಾರೆ–ನಿಮ್ಮ ಕಿವಿ ಕಿವುಡಾಗುವವರೆಗೆ. ಆದರೆ ಈ ಸಾಹಿತ್ಯಕಲಾ ಪ್ರೇಮಿಗಳು ಕೇವಲ ರಸಿಕನ ಹೃದಯ, ಮನಸ್ಸಿನ ಕಡೆಗೆ ಗಮನವಿತ್ತಿದ್ದಾರೆ–ಅದೂ ಆ ರಸಿಕತೆ ಆರೋಗ್ಯವಾಗಿರುವಾಗ!

ಈಚೆಗೆ ಅಮೆರಿಕ (ಇಂತಹ ಸಂಶೋಧನೆಗಳೆಲ್ಲ ಇನ್ನೆಲ್ಲಿ ನಡೆಯಲು ಸಾಧ್ಯ?) ದಲ್ಲಿ ನಡೆದ ಸಂಗೀತೋಪತಿಯ ಬಗ್ಗೆಯ ವಿವರಗಳು ಈಗತಾನೇ ಪ್ರಕಟಿಸಲ್ಪಟ್ಟಿವೆ; ಮಾನಸಶಾಸ್ತ್ರಿಗಳೂ, ವೈದ್ಯರೂ ಎಲ್ಲ ಇದರಲ್ಲಿ ಕೈಹಾಕಿದ್ದರೆ:

ಗುಳಿಗೆ, ಕಷಾಯ ಇತ್ಯಾದಿಗಳಿಂದ ಹೇಗೆ ಒಂದು ರೋಗವಾಸಿಯಾಗಬಹುದೋ ಅದೇರೀತಿ ಸಂಗೀತದಿಂದಲೂಸಹ ಸಾಧ್ಯವೆಂದು ಪ್ರಯೋಗಗಳಿಂದ ತಿಳಿದುಬಂದಿದೆ. ಮನುಷ್ಯನ ದೇಹ ಮತ್ತು ಮನಸ್ಸು ಅನೇಕ ನಿತ್ಯಕ್ರಿಯೆಗಳಿಗೆ ಪ್ರತಿಕ್ರಿಯೆ ತೋರಿಸುವಂತೆ (ಅರ್ಥವಾಯಿತೆ?) ಸಂಗೀತಕ್ಕೂ ಸಹ ತನ್ನ ಪ್ರತಿಕ್ರಿಯೆಯನ್ನು ತೋರಬಲ್ಲುದು.

ಪಿಟೀಲುವಾದನದಿಂದ ನಿಮ್ಮ ತಲೇನೋವು ಒಮ್ಮೆಲೆ ವಾಸಿಯಾಗುತ್ತದೆ; 'Harp' ಎಂಬ ವಾದನದಿಂದ ಹುಚ್ಚುಬಿಡುತ್ತದೆ.

ಅನೇಕ ಬಗೆಯ ಮನೋವಿಕಾರಗಳಿಗೆ ಸಂಗೀತವೇ ಉತ್ತಮಸಾಧನ. ದುರ್ಬಲ ಎದೆಯುಳ್ಳವರಿಗೆ ಪ್ರೇಮಗೀತೆಯೇ ಮದ್ದು.

ಇಟಲಿಯ ಪ್ರಸಿದ್ಧ ಮನಶ್ಶಾಸ್ತ್ರಿಯೊಬ್ಬನ ಹೇಳಿಕೆಯಂತೆ ಶಾಸ್ತ್ರೀಯ ಸಂಗೀತದಿಂದ ಅವನ ರೋಗಿಯೊಬ್ಬನ ಮೆದುಳು ವಿಪರೀತ ಊದಿತಂತೆ!

ಅಮೆರಿಕೆಯಲ್ಲಿ ಒಬ್ಬ ಮೂಕ ಇದ್ದಕ್ಕಿದ್ದಂತೆ ಮಾತಾಡಲು ಪ್ರಾರಂಭಿಸಿದ ನಂತೆ ಸಂಗೀತಕೇಳಿ. ಸಂಗೀತ ಪ್ರೇಮಿಗಳಿಗೆ ಇದರಲ್ಲಿ ಅತಿಶಯವೇನೂ ಕಾಣದಿರ ಬಹುದು!

ಇಷ್ಟೇ ಅಲ್ಲ. ಸಂಗೀತದಿಂದ ಪ್ರಾಣಿಗಳ ನರಗಳೂ, ಉಚ್ಛ್ವಾಸ ನಿಶ್ವಾಸಗಳೂ ವಿವಿಧ ಪ್ರತಿಕ್ರಿಯೆಗಳನ್ನು ತೋರಿಸುತ್ತವೆ. ಸಂಗೀತದಿಂದ ಕುದುರೆಗಳೂ, ಕತ್ತೆ ಗಳೂ ಹೆಚ್ಚಿಗೆ ಕೆಲಸಮಾಡಲು ಸಾಧ್ಯವಿದೆಯಂತೆ!


ಆದರೆ ಅನೇಕವೇಳೆ ರೋಗಕ್ಕೆ ತಕ್ಕಂತಹ ಸಂಗೀತದಬದಲು ಬೇರೆವಿಧದ ಸಂಗೀತದಿಂದ ಅನಾಹುತಗಳಾಗಬಹುದು; ಮರಣಗೀತೆಯಿಂದ ನಾಡಿನಿಲ್ಲುತ್ತದೆ. ಹೃದಯ ದುರ್ಬಲವಾಗುತ್ತದೆ.

ಆದರೆ ನಮ್ಮದೇಶದಲ್ಲಿಯೂ ಇದೇರೀತಿ ಸಂಗೀತ-ರೋಗಗಳ ಸಂಬಂಧವಾಗಿ ವಿಶೇಷ ಸಂಶೋಧನೆ ನಡೆಯಬೇಕಾದುದು ಅತ್ಯಗತ್ಯ. 'ಸಾಂಸ್ಕೃತಿಕ ಪ್ರಚಾರ'ದ ಅಂಗವಾಗಿ ಈ ಸಂಶೋಧನೆಯನ್ನೂ ನಡೆಸಿದರೆ ಖರ್ಚೂ ಕಡಿಮೆ, ಉತ್ತಮ ಫಲ ಗಳೂ ಬರುತ್ತವೆಂದು ನನ್ನ ನಂಬಿಕೆ.

ಇದಕ್ಕೆ ನಮ್ಮ ನಾಡಿನ ಸಂಗೀತ ಪ್ರೇಮಿಗಳ, ಮನಶ್ಶಾಸ್ತ್ರಿಗಳ ಹಾಗೂ ಸರ್ಕಾರದ ಬೆಂಬಲ ಅತ್ಯಗತ್ಯವೆಂದು ಹೇಳಬೇಕಾಗಿಲ್ಲ.

(ನೆರವು ಸಿಕ್ಕರೆ) ಇಷ್ಟರಲ್ಲೇ ಬೆಂಗಳೂರಿನಲ್ಲೇ ಒಂದು 'ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸಂಗೀತೋಪತಿ' ಎಂಬ ಸಂಸ್ಥೆಯನ್ನು ಸ್ಥಾಪಿಸಲು ಏರ್ಪಾಡು ನಡೆಯುತ್ತಿದೆ—

—ಬಿ. ಎನ್. ಮೂರ್ತಿ.



"ಹಲೋ....ರಂಗನಾಥ್....ಓಹ್!....ರಂಗನಾಥ್ ತಾನೇ?"

ಕುರಿನಾಟಕ; ಸುಗಂ ಎಂಗೆ

(ನವ್ಯಗದ್ಯ)

ಕಾವೇರಿಯಿಂದ ಮಾಗೋದಾವರಿಯವರೆಗೆ, ಪಲವುಂ ನಾಲಗೆಯುಳ್ಳವರ್, ಇಂದು ಕಾಂಗ್ರೆಸ್, ನಾಳೆಪ್ರಸವಾ, ಹಿಂದು ಮುಂದನರಿಯದೆ ಬೆಂದು ಬೇಗುದಿಗೊಂಬರು. ಕಾವಲಿಸಟ್ಟುಗ, ಜರಿಪೇಟ ಬರಿಮನ, ಎರೆನಾಡು ಮುದ್ದೆರಾಮರು, ಹೋಳಿಗೆ ಹೆತ್ತುಪ್ಪ ಕರಿಕಡುಬು ಗರಿಗರಿ ರೊಟ್ಟಿ ಕಾಲಿಪಿಟ್ಟು ದೋಸೆ ಕಾಫಿ ಗಂಜಿ ತಿಂದು, ಒಂಡುನೀರ ಕುಡಿದು ಬೀಡಿ ಸೇದುವರು. ಏನೆಂದು ಬಣ್ಣಿಸಲಿ ಆ ನಾಡ ಜನಪದವನು? ಅವರಿದ್ದರು ಒಂದೇ ಇರದಿದ್ದರು ಒಂದೇ ಇದ್ದು ಇಲ್ಲದಹಾಗೆ ಆಗಿಬಿಟ್ಟರಿ ತಂದೆ. ಗದ್ದುಗೆ ಬಿದ್ದುಹೋಯಿತು. ತಂತ್ರಿಯಾದವ ಮಂತ್ರಿ. ಕಂತ್ರಿನಾಯಿಗಳ ಬೊಗಳಾಟ.

ಜಕ್ಕಣನ ನಾಡಿನಲಿ ಚಕ್ಕುಲಿಗೆ ಗತಿಯಿಲ್ಲ. ಇನ್ನೂಯಾಕೆ ಬರಲಿಲ್ಲವೊ ಹುಬ್ಬಳ್ಳಿಯಾವಾ? ಹಂಪೆಯೊಂದು ಹಾಳುಕೊಂಪೆ. ವಿದ್ಯೆಯರಣ್ಯವ ಹೊಕ್ಕಿತು. ಸುಲಿದಬಾಳೆಯ ಹಣ್ಣಿಲೋಕವೇ ನುಂಗುತಿದೆ. ಹರ್ಷನ ಸೋಲಿಸಿದ ಬೋಳುಗುಮ್ಮಟ ಭಣ ಭಣ. ಕಾಯೌಶ್ರೀಗೌರಿ.

ಸಭೆಗೊಂದು ಬಣ್ಣ ಊರಿಗೊಂದು ಮಾತು, ಕೇರಿಗೊಂದು ಪಾಲಿಸಿ ತ್ರಿಶಂಕು ನರಕ. what is ailing thee my boys?

ರೊಕ್ಕ ಕೈಯೊಳಗಿಲ್ಲ, ದೇಶಮುಖ ಮಹರಾಷ್ಟ್ರ. ಹುರುಡು ಮೈಯೊಳಗಿಲ್ಲ, ಗೋಧಿ ಪಂಚಾಪಿನಲಿ, ಅತ್ತ ಆಂಧ್ರ, ಇತ್ತ ತಮಿಳ ಹತ್ತಿರವೆ ಕೇರಳ, ಇನ್ನೆತ್ತಲ್ ಉಳಿಗಾಲವೆಂದು ತಲೆವೆಳಗಾದೆನ್.

ಬೆಕ್ಕು ಹೆಬ್ಬುಲಿಯಾಗೆ, ಎಕ್ಕೆ ಬಡಿಗೋಲಾಗೆ, ಬಿಕ್ಕಿ ಅತ್ತನು ಸರ್ವಜ್ಞ. ವಿಕರ್ಣನಾಟಕ, ವಿವರ್ಣರಂಜಿತಚಿತ್ರ. ಕಪ್ಪೆಸತ್ತರೆ ಕಾವ್ಯ, ಬರೆದವನೆ ಕವಿ, ನಡೆದುದೆ ಮಾರ್ಗ, ಪದಮಿಡಲಲ್ಲಿಯೆ ಗುಂಡಿ. ಅಶ್ಲೀಲವೆಲ್ಲವೂ ವಿಶ್ವಸಾಹಿತ್ಯ. ಅಳುವೆ ನವರಾಗ, ಉಮರನೇ ಗಾಂಧಿಭಕ್ತ. ಬೆಳ್ಳಗಿದ್ದುದೆ ಟೋಪಿ, ಪತಿಹೀನರೆ ಕಮ್ಯುನಿಸ್ಟರು. All that glitters is gold.

ಬೊಂಬಡಿ ಬಡೆವುದು ಭಾಷಣ, ಸಂತೆಂಗುಲಿ ಕಂತೆಗಳ ಅಸೆಂಬ್ಲಿ. ಬೇಲಿ ನುಸುಳುವುವು ಎಮ್ಮೆಗಳೋ, .. ! ಓ ತಾಯಿ, ನಮ್ಮವ್ವ, ಕನ್ನಡದ ಸಾಮ್ರಾಜ್ಞಿ ಆಳಾ ಕುರಿಗಳನ. ಮರ್ಯಾದೆಯಿಂದ ಕರೆಯಿರಿ ಎಮ್ಮ. ಬರ್ತಿಯೋ ಇಲ್ಲಲೇ ಬೊ.... ಗನೇ! Thus speaks on the ancient man

ಅನಾಥ ಇವನೊಬ್ಬ ಈ ಜನ್ಮ ರೋಸಿ ವೇಥೆಯನು ತಾಳದಲಿ ಹಾರುವನು ಹೊಳೆಗೆ. ಅಸಹ್ಯ ಭೈರವಿಯ ರಾಗತಾನ ಪಲ್ಲವಿ.

ರೈಲ್ವೆ ತಮಿಳರಿಗೆ, ಪೋಸ್ಟು ಕೇರಳಕೆ, ಆಂಧ್ರರಿಗೆ ಪ್ರಾಂತ, ಭಾಷೆಯನು ಹಿಂದಿಗೆ, ಕಲೆಯ ಬಂಗಾಳಕ್ಕೆ, ಸಿನಿಮ ಹಾಲಿವುಡ್ಡಿಗೆ ಬೆಂಗಳೂರ ವಿಶ್ವಕ್ಕೆ, ಪಾವ ಗಡ ಪೋರ್ಚುಗಲ್ಲಿಗೆ ತೊಟ್ಟನೆ ಪಸಾಯ ದಾನಂಗೊಟ್ಟಂ. ಷೇಕ್ಸ್‌ಪಿಯರ ಮರಿ, ಕಾಳಿದಾಸ ಪೂರ್ವಾಶ್ರಮಿಗಳು phd ವೈತರಣಿ ಆಸ್ಪತ್ರೆಯ ಚರಂಡಿ. ಕ್ರಿಕೆಟ ನೋಪನರ್ ಇಂಜಿಯರ್ ಹದಿನೆಂಟು ಮುಂಡಿಯಲಿ ತಾಳವಿಲ್ಲದೆ ಕುಣಿವ ಬೇತಾಳ ಗಳು ಫಡಫಡ ಎಂದನು ಭೀಮ. ಅಲ್ಲ ಹಾಗೆಂಬುದೇ ಡೀಸೆಲೆಂಜಿನ್.

ಬಿಡುಬಿಡು ಕಂನಡ ದಾಸೆಯನು. ಜೇನುಸುರಿವ ಹಾಲುಹರಿವ ನಾಡಿನಲಿ, ತುಪ್ಪದ ಗಿಂಡಿಯು ದೊಪ್ಪನೆ ಕೆಡೆದು ತಿಪ್ಪೆಗೆ ಬಿತ್ತು.

ಷೇಟಿ ಮಾತೇನಜ್ಜಿ? ಮಾಡಿದುದ ಸುಣ್ಣವನು ಮಾರಾಯ.



"ಒಳ್ಳೇಮಾತಿಂದ ಇಳಿದು ಬರ್ತ್ತೀಯೋ?....ಅಥ್ವಾ ನಾನೇ ಹತ್ತಿಬರಲೋ .. ?"

ಯಾತ್ರಿಕರ ಪತ್ರ

ನಾನು, ರಾಜ, ಚಂದಿ ಜೀಕನಹಳ್ಳಿಯನ್ನು ಬಿಟ್ಟೆವು. ನಮ್ಮ ಶ್ವಾಸವೂ ನಿರಾಯಾಸವಾಗಿ ಆಡಹತ್ತಿತು. ಮೊದಲನೆಯದಾಗಿ ನನ್ನ ಚಪ್ಪಲಿಗಳು ರಿಪೇರಿಯಾಗಿ ನನ್ನ ಕೈಗಳಿಗೆ ಬಿಡುವಾಯಿತು ಎರಡನೆಯದಾಗಿ ನಮ್ಮ ವಾಹನಗಳು ರಿಪೇರಿಯಾಗಿ ತೈಲಮಯವಾಗಿ ಕಾಲುಗಳಿಗೆ ಹದವಾಗಿದ್ದವು ಮೂರನೆಯದಾಗಿ ನನ್ನ ಸ್ನೇಹಿತರನ್ನು ಬಿಟ್ಟು ಅವಸ್ಥೆಪಟ್ಟು ಪುನಹ ಅವರ ಹಂಬಲಹತ್ತಿ ಅವರನ್ನು ಸೇರಿದ್ದಾಯ್ತು. ನಾಲ್ಕನೆಯದಾಗಿ ಇತ್ತ ನನ್ನ ಸ್ನೇಹಿತರು ನಾನಿಲ್ಲದ ಕಾಲದಲ್ಲಿ ಲಗಾಮಿಲ್ಲದ ಕುದುರೆಗಳಹಾಗೆ ಗುದ್ದಾಡಿ ನಾ ಬರುವುದನ್ನೇ ಎದುರುನೋಡುತ್ತಿದ್ದರು. ಈಗ ಶಾಂತಿ ಏರ್ಪಟ್ಟಿದೆ. ಐದನೆಯದಾಗಿ—ಅಂತೂ ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಶ್ವಾಸ ನಿರಾಯಾಸವಾಗಿ ಆಡಹತ್ತಿತು ಹೀಗೇ ಇದ್ದು, ಭಗವಂತನು ಯಾವುದೊಂದೂ ಕುಂಟು ನೆಪಮಾಡಿಕೊಂಡು ಅವತಾರವೆತ್ತಿ ಈ ಪ್ರಪಂಚಕ್ಕೆ ಇಳೀದೇ ತನ್ನ ಸ್ವರ್ಗದಲ್ಲೇ ಹಾಯಾಗಿ ಲಲ್ಲೆಹೊಡೀತಾ ಇದ್ದುಬಿಟ್ಟರೆ ನಾವೂ ಸುಖವಾಗಿರಬಹುದು—ನಮ್ಮ ರಾಜಕೀಯ ಪಟುಗಳು ಪ್ರಳಯ ತರೋತನಕ:—ಅನ್ನುವ ಭರವಸೆ ಮೂಡಿತ್ತು.

ನಾವು ಮೂವರು ಸ್ನೇಹಿತರು ಹೋಗುತ್ತಿರುವಾಗ ಇತರ ಜನರು ನಮ್ಮ ಕಣ್ಣಿಗೆ ಚಿಕ್ಕದಾಗಿ ಕಂಡರು. ಅವರ ಬಗ್ಗೆ ನಮ್ಮಲ್ಲಿ ಒಂದು ತರಹ ತಿರಸ್ಕಾರವೂ ಮೂಡಿತು—ಮೈಸೂರು ಮೆಯಿಲ್ ಟ್ರೈನಿನಲ್ಲಿ ಇಂಟರ್‌ಕ್ಲಾಸಿನಲ್ಲಿ ಪ್ಲೇಯರ್ ಸಿಗರೇಟ್ ಸೇದುತ್ತಾ ಕುಳಿತು ಹೋಗುತ್ತಿರುವಾಗ ನಮಗೆ ಹೆಜ್ಜಾಲ ಸ್ಟೇಷನ್ನಿನಲ್ಲಿ ಬಾಯಿಬಾಯಿಬಿಡುತ್ತಾ ನಮ್ಮ ರೈಲನ್ನು ನೋಡುತ್ತ ನಿಂತಿರುವ ಜನರನ್ನು ಕಂಡಹಾಗೆ! ಹೀಗೆಯೇ ಬಹಳದೂರ ಹೋಗಬಹುದಿತ್ತು. ನಮ್ಮ ಸ್ನೇಹಿತರಿಗೂ ತಲಕಾಡು ಬೇಗಸೇರುವ ಆಸೆಯಿತ್ತು. ಆದರೆ ಹಠಾತ್ತನೆ ಒಂದು ಬಿರುಘಾಳಿಯಲ್ಲಿ ಸಿಕ್ಕಿಹಾಕಿಕೊಂಡೆವು, ನಮಗಿದ್ದ ಆಗಿನ ಶಾಂತಿಯ ಸ್ವಪ್ನಕ್ಕೂ, ನಾವು ಸಿಕ್ಕಿಹಾಕಿಕೊಂಡ ಧಾಳಿಗೂ ಹೋಲಿಸಿದರೆ—ಭೀಮ-ಧುರ್ಯೋಧನರ ಗದಾಯುದ್ಧದಲ್ಲಿ ಗದೆಗಳ ಮಧ್ಯೆ ಮಕರಂದ ಸಿಕ್ಕಿಕೊಂಡಹಾಗಾಯಿತು!

ನಮ್ಮ ವಾಹನಗಳಿಂದಿಳಿದು ಸ್ವಲ್ಪ ಚೇತರಿಸಿಕೊಂಡೆವು. ಆಕಾಶಕ್ಕೇರಿದ್ದ ಧೂಳು ನೆಲಕ್ಕಿಳಿದಮೇಲೆ, ನಮ್ಮ ಸುತ್ತ ಹದಿನೈದು-ಇಪ್ಪತ್ತು ಜನ-ಒಬ್ಬೊಬ್ಬರೂ ಒಂದೊಂದು ಬಾವುಟ-ಒಂದೊಂದು ಪಠ ಹೊತ್ತು "ಭೋಲೋ-ಮಹಾತ್ಮಾ ಗಾಂಧೀಕೀ ಜೈ!"-"ಬೊಲೋ ನೆಹರೂಕೀ ಜೈ!"-ಅಂತಾ ಅರಚುತ್ತ ಕೂಗುತ್ತಾ

ಓಡಾಡುತ್ತಿದ್ದುದು ಕಂಡುಬಂತು. ಸರಿ—ನನ್ನ ಮನಸ್ಸಿನಲ್ಲಿ ನಿರ್ಧರವಾಯ್ತು—ಒಂದು ಹೊಸಬೀಡಿ ಅಥವಾ ಒಂದು ಹೊಸನಶ್ಯ ಮಾರುಕಟ್ಟೆಗೆ ಬಂತು ಅಂತ! ನಾನು ಪುನಹವಾಹನ ವೇರಲಿದ್ದೆ, ಅಷ್ಟರಲ್ಲಿ ಚಂದಿ ನಿಲ್ಲಿಸಿದ. ಅವನು ಆಗಲೇ ಆ ಧೂತರಲ್ಲೊಬ್ಬರನ್ನು ಕೇಳಿ ವಿಚಾರ ತಿಳಿದುಕೊಂಡಿದ್ದ—

"ಲೋ—ಇವತ್ತು ಇಲ್ಲಿ ಯಾವುದೋ ಚುನಾವಣೆನಂತೋ" ಅಂದ.

ಅವನು ಮಾತಿನ ಶೃತಿಯಲ್ಲಿಯೇ ತಿಳಿಯಿತು—ಆ ಚುನಾವಣೆ ನಿರ್ಧರವಾಗುವತನಕ ನಾವು ಆ ಊರು ಬಿಡುವಹಾಗಿಲ್ಲವೆಂದು. ನಿಂತೆವು.

ಚುನಾವಣೆಯ ಅಖಾಡ ಸೇರಿದ್ದು ಊರಮುಂದಿನ ಸಿಡಿವೀರಣ್ಣನಗುಡಿ ಪಡಸಾಲೆಯಲ್ಲಿ. ನಾವು ಹಾಜರಿದ್ದೆವು. ಎಲ್ಲಿಯುಹಾಗೆ ಪಾರ್ಟಿಗಳು! ಗಾಂಧೀ ಚಿತ್ರದಪಾರ್ಟಿ-ನೆಹರೂ ಚಿತ್ರದಪಾರ್ಟಿ-ಸುಭಾಸ್ ಚಿತ್ರದಪಾರ್ಟಿ-ಇತ್ಯಾದಿ-, ಮತ್ತಿಬ್ಬರು ಈ ಚಿತ್ರಗಳ ಜೊತೆಗೆ ಒಂದು ಕೆಂಪುಬಟ್ಟೆ-ಒಂದೊಂದು ಕುಡುಗೋಲನ್ನು ಗಾಳಿಯಲ್ಲಿ ಬೀಸುತ್ತ ಅರಚುತ್ತಿದ್ದರು.

ಭಾಷಣಗಳು ಶುರುವಾದವು. ಸ್ಪರ್ಧಿಗಳ ಬಗ್ಗೆ ಭೀಕರವಾದ ಟೀಕಾಸಹಿತ ಭಾಷಣಗಳಾದವು ಸ್ಪರ್ಧಿಗಳು ಭಾಷಣಕಾರರ ಟೀಕೆಗಳನ್ನು ಸಹಿಸಲಾರದೆ ತಮ್ಮ ತಮ್ಮ ಮಾನಗೌರವಗಳ ರಕ್ಷಣೆಯನ್ನು ತಮ್ಮ ಕಡೆಯ ಶಸ್ತ್ರ ಸಜ್ಜಿತ ಸಿಬ್ಬಂದಿಗಳಿಗೆ ಒಪ್ಪಿಸಿ ಅಖಾಡಾದಿಂದ ತಾವು ಫಲಾಯನ ಮಾಡಿದರು. ಭಾಷಣಗಳು ಮುಗಿದ ಮೇಲೆ ಯುದ್ಧಶುರುವಾಯ್ತು, ನಾನು ರಾಜಚಂದಿ ಯುದ್ಧರಂಗಕ್ಕೆ ಅರ್ಧಮೈಲಿ ದೂರ ಓಡಿಹೋಗಿ ನಿಂತೆವು. ನಾವು ಪುನಹ ವಾಪಸಾದಾಗ ಒಬ್ಬ ಮುದುಕಪ್ಪ ಭಾಷಣಮಾಡುತ್ತಿದ್ದ. ನಾವೂ ಧೈರ್ಯವಾಗಿ ಹತ್ತಿರ ಹೋಗಿ ನಿಂತೆವು.

ಆತ ಹೇಳುತ್ತಿದ್ದ:

"ನೀವೆಲ್ಲಾ ಸುಮ್ಮನೆ ಈ ಪೋಕ್ರೀಜನ ಅರಚಿದ್ದೆಲ್ಲಾ ಮನಸ್ಸಿಗೆ ತಕೋಬೇಡಿ. ನೀವು ಇವತ್ತು ಓಟಾಕೋದು ಗಾಂಧೀಜೀಗಲ್ಲ—ನೆಹರು ಅಯ್ಯಂಗೂ ಅಲ್ಲ ಇಕೋ—ಈ ಊರಲ್ಲೇ ನಿಮ್ಮ ಕಣ್ಣುಮುಂದೆ ಓಡಾಡೋರ್ಗೆ! ಇವರಲ್ಲೇ ಇರೋದ್ರಲ್ಲಿ ತುಸ ವಳ್ಳೇರ್ನ ಆರಿಸಿ. ಆರಿಸಿದಮೇಲೆ ಅವರು ಹೇಳಿದಂಗೆ ಕೇಳಿ. ಚುನಾಯಿಸಿಬಿಟ್ಟು ಅವರಿಗೆ ತಂಟೆಕೊಡ್ತಾ ಅವರ ಕೆಲಸಕ್ಕೂ ಅಡ್ಡಿಮಾಡಿ ನಮ್ಮೂರಿಗೂ ಕೆಟ್ಟೆಸರು ತರಬೇಡಿ ನಾನು ಮುದುಕ. ನಿಮ್ಮ ಈ ಓಟುಗೀಟೆಲ್ಲಾ ಹಿಂದಿರ್ಲಿಲ್ಲ. ಆದ್ರೇ ನಮ್ಮೂರಲ್ಲಿ ಇಲ್ಲೀವರಿಗೆ ಯಾವಕೆಲಸಕ್ಕೂ ಅಡ್ಡಿ ಇಲ್ದೆ ಇತ್ತು. ಈ ಓಟು, ಈ ಪಾರ್ಟಿ, ಈ ಫೊಟೋ ಒತ್ಕೊಂಡು ತಿರ್ಗಾಡೋದು ಇವೆಲ್ಲಾ ಬಂದಿರೋದು ಒಳ್ಳೇದಕಲ್ಲ—ಅದರಲ್ಲೂ ಈ ಚಿಕ್ಕ ಚಿಕ್ಕ ಊರುಗಳಲ್ಲಿ! ಇಕೋ ನೋಡಿ—ಆ ಫೊಟೋಗಳಗತಿ! ನಿಮ್ಮ ಗುದ್ದಾಟದಲ್ಲಿ ಪುಡಿಪುಡಿಯಾಗಿವೆ!—"

(ಹೌದು–ಸುತ್ತಲೂ ನೋಡುವಲ್ಲಿ ನಮ್ಮ ಗಾಂಧೀಜೀ ನೆಹರೂ—ಇವರುಗಳ ಚಿತ್ರಗಳು ಒಡೆದು ಚೂರುಚೂರಾಗಿದ್ದವು)

"—ಪಾಪ–ಆ ಫೋಟೋಗಳನ್ನು ಮನ್ಯಾಗೇ ಇಕ್ಕಿದ್ದರೆ ಚೆನ್ನಾಗಿರ್ನಿಲ್ವ? ಏನೋ–ಆ ಮಹಾನುಭಾವರಿಗೆ ನಿಮ್ಮಿಂದ ಬೇರೆ ಯಾವ ಗೌರವಾನೂ ಮಾಡೋಕೆ ನಿಮಗೆ ಯೋಗ್ಯತೆ ಇಲ್ಲಾಂತ ಕಾಣುತ್ತೆ–ಹೋಗಲಿ – ನಾನು ಮುದುಕ ತಿಳಿದಿದ್ದು ಹೇಳಿದೆ"— ಅಂತ ಮುಗಿಸಿ ನಿಟ್ಟುಸುರುಬಿಡುತ್ತ ಕೂತ.

ಆ ಮುದುಕನ ಮಾತಿಗೆ ನಮ್ಮ ಒಪ್ಪಿಗೆ ಇತ್ತು ಮುಂದೆ ನಡೆದೆವು. ನಾನು ಆ ಊರುಬಿಟ್ಟು ಮುಂದೆ ಪ್ರಯಾಣ ಬೆಳೆಸೋಣವೆಂದೆ. ರಾಜಿ ಒಪ್ಪಲಿಲ್ಲ, ಅವತ್ತು ಆ ಊರಲ್ಲಿ ಚುನಾವಣೆಯ ಅಂಗವಾಗಿ ಎರಡು ನಾಟಕಗಳು ಬೇರೆ ಏರ್ಪಾಟಾಗಿದ್ದವು. ಅವನ್ನೂ ನೋಡಿಯೇ ಹೋಗೋಣವೆಂದು ವಾದಿಸಿದ. ಚಂದಿಯನ್ನು ಮೊದಲೇ ಒಪ್ಪಿಸಿದ್ದ. ಅಂದಮೇಲೆ ನನ್ನ ಒಪ್ಪಿಗೆ ಬೇಕಾದ ಪ್ರಮೇಯವಿರಲಿಲ್ಲ, ನಾಟಕಗಳನ್ನು ನೋಡುವುದೆಂದಾಯಿತು.

ಒಂದರ ಪಕ್ಕದಲ್ಲೇ ಇನ್ನೊಂದು ನಾಟಕವೂ ಒಂದುಕಡೆ "ಸೀತಾಸ್ವಯಂವರ" ಇನ್ನೊಂದುಕಡೆ "ದ್ರೌಪದಿಸ್ವಯಂವರ" ನನ್ನ ಮನಸ್ಸಿಗೆ ಒಂದು ಕಾಂಗ್ರೆಸ್ ಪಾರ್ಟೀದೆಂತಲೂ ಎರಡನೆಯದು ಕಮ್ಯೂನಿಸ್ಟರದೆಂತಲೂ ತೋಚಿತು! ಎರಡು ನಾಟಕಗಳೂ ಒಂದೇ ರಾತ್ರಿ, ಒಂದೇ ಸಮಯದಲ್ಲಿ ಆಗ ಬೇಕಾದವು ನಮಗೆ ಉಭಯಸಂಕಟವಾಯ್ತು. ಹಾಗೂ ಹೀಗೂ ಒದ್ದಾಡಿ ಕಡೆಗೆ ನಾನು ಸೀತಾಸ್ವಯಂವರಕ್ಕೂ, ರಾಜಚಂದಿ ದ್ರೌಪದೀಸ್ವಯಂವರಕ್ಕೂ ಹೋಗುವುದೆಂದು ನಿರ್ಧರಿಸಿದೆವು.

ರಾತ್ರಿ ಎಂಟುಘಂಟೆಗೆಲ್ಲಾ ಆ ಊರಿನ ಟಾಜ್‌ಮಹಲಿನಲ್ಲಿ ಮುಜ್ಬೋರೆ, ಕಾಫಿಗಳ ಕುಡಿದು ರಂಗಸ್ಥಳಕ್ಕೆ ಬಂದೆವು. ಸರಿಯಾಗಿ ಹತ್ತೂವರೆ ಘಂಟೆಗೆ ದೀವಟಿಗೆಗಳು ಬಂದವು ಹನ್ನೊಂದೂಕಾಲಿಗೆ ಜನಗಳು ಬಂದರು. ಹನ್ನೆರಡಕ್ಕೆ ಬಂದವರೆಲ್ಲಾ ಬಣ್ಣ ಪೋಷಾಕುಗಳನ್ನು ಹಾಕುಕ್ಕೆ ಶುರುಮಾಡಿದರು. ಎಲ್ಲರೂ ಬಣ್ಣ ವೇಷಗಳನ್ನು ಧರಿಸಿದಮೇಲೆ ನಾನು, ರಾಜ, ಚಂದಿ ಉಳಿದೆವು. ಅಷ್ಟುಹೊತ್ತಿಗೆ ಭಾಷಣ ಮಾಡಿದ ಮುದುಕಪ್ಪ ವೇಷವಿಲ್ಲದೆ ಬಂದ. ವಿಚಾರಿಸಿದ್ದರಲ್ಲಿ, ನಾಟಕದ ಮಧ್ಯೆ ಮಾರಾಮಾರಿಯಾದೀತೆಂಬ ಭಯದಿಂದ ಹೆಂಗಸರನ್ನು ನಾಟಕಕ್ಕೆ ಕರೆತರಲಿಲ್ಲವೆಂದು ಹೇಳಿದ. ಇದನ್ನು ಕೇಳಿ ನಾವು ಮೂವರೂ "ಸೀತಾಕಲ್ಯಾಣಕ್ಕೇ" ಹೋಗೋಣವೆಂದು ನಿರ್ಧರಿಸಿದೆವು—ಏಕೆಂದರೆ ಮಾರಾಮಾರಿಯಾಗುವುದಾದರೆ "ದ್ರೌಪದೀಕಲ್ಯಾಣ"ದಲ್ಲೇ ಪಾಂಡವರಲ್ಲಿ ಮೊದಲು ಶುರುವಾಗುತ್ತೆಂದು ಊಹಿಸಿದೆವು.

ಮೂರುಘಂಟೆಗೆ ನಾಟಕಗಳು ಶುರುವಾದವು. ಥಿಯೇಟರಿಂಗೆಲ್ಲಾ ನಾವೇ ಮೂರುಜನ-ನಡುಗುತ್ತ ಕುಳಿತೆವು. "ಸೀತಾಕಲ್ಯಾಣ"ದಲ್ಲಿ ಮುಖ್ಯಪಾತ್ರ ವಹಿಸಿದ್ದವರನ್ನು ಬಿಟ್ಟು ಮಿಕ್ಕವರೆಲ್ಲಾ ವಾನರರ ವೇಷಕಟ್ಟಿಕೊಂಡು ಅದೇ ಅವಸ್ಥೆಯಲ್ಲೇ ಓಡಾಡುತ್ತಿದ್ದರು-ಆದರೂ ನನಗನ್ನಿಸಿತು-ಸೀತಾಕಲ್ಯಾಣದಲ್ಲೇ ವಾನರರ ಸೈನ್ಯವೆಲ್ಲಿಂದಬಂತು ಅಂತ! ರಾಮಾಯಣದಲ್ಲಿ ಸೀತಾಪಹರಣವಾದಮೇಲೆ ವಾನರ ಸೇನೆ ಬರುತ್ತೇಂತ ಓದಿದ ಜ್ಞಾಪಕ! ಆದರೂ ಈಗಿನ ವಾಲ್ಮೀಕಿಗಳಿಗೆ ಕವಿಸ್ವಾತಂತ್ರ್ಯ ಹೆಚ್ಚಿರುವುದರಿಂದ ಇದನ್ನೂ ಒಪ್ಪಿದೆ ಅಂತೂ ವಾನರರ ಓಡಾಟ, ಋಷಿಗಳ ಕೂಗಾಟ, ಸೌತಿಯರ-ಅಂದರೆ ದಶರಥನ ಮೂವರು ಪತ್ನಿಯರ — ಬೈದಾಟಗಳಲ್ಲಿ ಸೀತೆಯನ್ನೂ ಸ್ಟೇಜಿನಮೇಲೆ ಕರೆತಂದರು.

ಇನ್ನೇನು—ಶ್ರೀರಾಮ ಬಂದು ಅಲ್ಲಿದ್ದ ಶಿವಧನುಸ್ಸನ್ನು ಎತ್ತಬೇಕು ಎಲ್ಲರು ಚಪ್ಪಾಳೆ ತಟ್ಟಲು ಕೈಸವರುತ್ತಿದ್ದಾರೆ—ಇದ್ದಕ್ಕಿದ್ದಹಾಗೆ ಮೂವರು ಸ್ಟೇಜಿನಮೇಲೆ ನುಗ್ಗಿ ಸೀತೆಯನ್ನೂ, ಅಲ್ಲಿದ್ದ ಶಿವಧನುಸ್ಸನ್ನೂ ಎತ್ತಿಕೊಂಡು ಮಾಯವಾದರು! ನಮಗೆ ಬಹಳ ಆಶ್ಚರ್ಯವಾಯ್ತು! ಆದರೂ ಮನಸ್ಸಿಗೆ ಒಂದು ನೆಮ್ಮದಿ-ಸಂಪೂರ್ಣ ರಾಮಾಯಣವನ್ನು ನೋಡಿದ್ದಾಯಿತು ಅಂದುಕೊಂಡೆ. ಆದರೆ—ರಾವಣನು ಸೀತೆಯನ್ನು ಸ್ವಯಂವರ ಕಾಲದಲ್ಲೇ ಅಪಹರಿಸಿದ ಹಂಸಕಲ್ಪನೆ ನನ್ನ ಬಾಯಿಕಟ್ಟಿತು! ಆದರೂ ಅಷ್ಟು ದೊಡ್ಡ ರಾಮಾಯಣವನ್ನು ಸಾಧಾರಣ ಮನುಷ್ಯರು ಜೀರ್ಣಿಸಿಕೊಳ್ಳುವುದಕ್ಕೆ ಈ ಉಪಾಯವೇಸರಿ ಅನ್ನಿಸಿತು!

ಇತ್ತ ರಂಗಸ್ಥಳದಲ್ಲಿ ಗುದ್ದಾಟ ಶುರುವಾಗಿತ್ತು. ರಾಮಾಯಣದ ಯುದ್ಧವನ್ನೂ ನೋಡೋಣವೆಂದು ಆ ಕಡೆ ಗಮನಕೊಟ್ಟೆ. ಅಲ್ಲಿ ಆಗುತ್ತಿದ್ದುದು ಆ ಎರಡು ನಾಟಕದ ಕಂಪೆನಿಗಳ ಮಧ್ಯೆ ಆಗುತ್ತಿದ್ದ ಯುದ್ಧ!

ಮೂವರೂ ಹೊರಕ್ಕೆ ಬಂದೆವು. ಹಾಗೂ ಹೀಗೂ ಇನ್ನೆರಡುಘಂಟೆಕಾಲ ಕಳೆದು ಬೆಳಿಗ್ಗೆ ಕಾಫಿಕುಡಿದು ಆ ಊರುಬಿಟ್ಟೆವು. ಕಾಫಿಕುಡಿಯುವಾಗ ತಾಜಮಹಲಿನಲ್ಲಿ ತಿಳಿಯಿತು—ಸೀತೇಪಾರ್ಟು, ದ್ರೌಪದಿಪಾರ್ಟು ಒಬ್ಬನೇ ಮಾಡಿದ್ದನೆಂದೂ, ಧನುಸ್ಸು ಒಂದೇ ಇದ್ದಿತೆಂದೂ ಸೀತಾಸ್ವಯಂವರವೂ ದ್ರೌಪದೀ ಸ್ವಯಂವರವೂ ಒಂದೇ ಮುಹೂರ್ತದಲ್ಲಿ ಆಗಿದ್ದರಿಂದ ಸೀತೆಯನ್ನೂ, ಧನುಸ್ಸನ್ನೂ ತ್ರೇತಾಯುಗದಿಂದ ದ್ವಾಪರಯುಗಕ್ಕೆ ಹಠಾತ್ತನೆ ರವಾನಿಸಲಾಯಿತೆಂದೂ—ಎಲ್ಲಾ ವಿಷಯಕ್ಕೂ ಸಮಾಧಾನ ದೊರಕಿತು.

ನಾವು ನಿಶ್ಚಿಂತೆಯಿಂದ ತಲಕಾಡುಕಡೆ ತಿರುಗಿದೆವು.

—ಕೇಫ.

ಕೋಳಿಪಿಳ್ಳೆಗಳು ಮತ್ತು ಐನ್‌ಸ್ಟೈನರ ಆಗ್ರಹ

ಮಂಚದಮೇಲೆ ಕುಳಿತು ಪ್ರಾಣೇಶ ಪೇಪರ್ ಓದುತ್ತಿದ್ದ.

ಅದೇ ದಿನ ಮೊಟ್ಟೆಯೊಡೆದು ಬೆಳಕು ಕಂಡ ೨೫೦೦೦ ಕೋಳಿಪಿಳ್ಳೆಗಳನ್ನು ವಿಮಾನದಲ್ಲಿ ಅಮೇರಿಕಾದಿಂದ ಕರಾಚಿಗೆ ಸಾಗಿಸಿದರಂತೆ— ಪೇಪರಲ್ಲಿ ಒಂದು ಸುದ್ದಿ. ಅದು ನ್ಯಾಯವೇ! ನಮ್ಮ ನೆರೆಯವರ ಜಂಭಕ್ಕೆ ಅಷ್ಟಾದರೂ ಇರಲಿ. ನಮಗೆ ಅಸೂಯೆಯಿಲ್ಲ. ಆದರೆ ಆ ಸುದ್ದಿಯ ಕೆಳಗೆ ಮತ್ತೊಂದು ಸುದ್ದಿಯೂ ಇತ್ತು. ಆದನ್ನು ಓದಿಯೇ ನಮ್ಮ ಪ್ರಾಣೇಶ ಕೆರಳಿದ್ದು.

ಜಗದ್ವಿಖ್ಯಾತ ವಿಜ್ಞಾನಿ ಐನ್‌ಸ್ಟೈನ್ ಹೇಳಿದರಂತೆ— "ನಾನು ಇನ್ನೊಮ್ಮೆ ಯುವಕನಾಗುವುದು ಸಾಧ್ಯವಿದ್ದು, ಜೀವನ ವೃತ್ತಿಯೊಂದನ್ನು ಆರಿಸಿಕೊಳ್ಳುವುದಾಗಿದ್ದರೆ, ವಿಜ್ಞಾನಿಯಾಗಲು, ಶಾಸ್ತ್ರಪಾರಂಗತನಾಗಲು ಅಥವಾ ಪಂಡಿತನೋ ಪ್ರಾಧ್ಯಾಪಕನೋ ಆಗಲು ಪ್ರಯತ್ನಿಸುತ್ತಿದ್ದಿಲ್ಲ; ರಿಪೇರಿ ಕೆಲಸವೋ ಚಿಲ್ಲರೆ ವ್ಯಾಪಾರವೋ ಏನಾದರೂ ಮಾಡಿಕೊಂಡಿರಲು ಇಷ್ಟಪಡುತ್ತಿದ್ದೆ. ಏಕೆಂದರೆ ಈಗಿನ ಪರಿಸ್ಥಿತಿಯಲ್ಲಿ (ಅಮೇರಿಕದಲ್ಲಿ) ಆ ಉದ್ಯೋಗಗಳಲ್ಲಾದರೂ ತಕ್ಕಮಟ್ಟಿಗೆ ಸ್ವಾತಂತ್ರ್ಯವಿದೆ"— ಎಂದು. ಮೆಕಾರ್ಥಿಗಳಿಂದಾಗಿ ಅಮೇರಿಕದಲ್ಲಿ ಮೇಧಾವಿಗಳಾದ ವಿಜ್ಞಾನಿಗಳಿಗೂ ವಿದ್ವಾಂಸರಿಗೂ ಸ್ವಾತಂತ್ರ್ಯವಿಲ್ಲ ಎಂಬುದನ್ನು ಸ್ಪಷ್ಟಪಡಿಸಲು ಐನ್‌ಸ್ಟೈನ್ ಹಾಗೆಂದರು. ಸ್ವಾತಂತ್ರ್ಯದ ತವರುಮನೆ ಎಂದು ಕೊಚ್ಚಿಕೊಳ್ಳುವ ಅಮೇರಿಕದಲ್ಲಿಯೂ ಇಂಥ ಸಮಾಚಾರವೆ? ಹೆಸರು ಕ್ಷೀರಸಾಗರಭಟ್ಟ; ಮಜ್ಜಿಗೆಗೆ ಮಾತ್ರ ತತ್ವಾರವೆ?

ಪರಿಸ್ಥಿತಿಯೇನೋ ಹಾಗೆಯೇ ಇಂದಿನ ಜಗತ್ತಿನಲ್ಲಿ ಎಲ್ಲ ವಿಷಯಗಳೂ ಅದೇರೀತಿ. ಎಲ್ಲವೂ ವಿಪರೀತ. ಆದ್ದರಿಂದ "ನಮ್ಮ ದೃಷ್ಟಿಯಲ್ಲಿಯೇ ಬದಲಾವಣೆಯಾಗಬೇಕು. ಆಗ ಎಲ್ಲವೂ ಸರಿಹೋಗುತ್ತದೆ. ಯಾವುದೂ ವಿಪರೀತವಾಗಿ ಕಾಣುವುದಿಲ್ಲ ಖೇದವುಂಟಾಗುವುದು ತಪ್ಪುತ್ತದೆ. ಅಷ್ಟರಮಟ್ಟಿಗಾದರೂ ನಾವು ಸುಖಿಗಳಾಗುತ್ತೇವೆ"—ಎಂದು ಕೊಂಕಿದ ಪ್ರಾಣೇಶ.

"ನಮ್ಮದು ಸ್ವಾತಂತ್ರ್ಯದ ದೇಶ ಎಂದು ಯಾವ ರಾಷ್ಟ್ರದವರಾದರೂ ಪದೇ ಪದೇ ಹೇಳುತ್ತಿದ್ದರೆ ಅಲ್ಲಿನ ಜನರ ತನು ಹೇಗೇ ಇರಲಿ — ಮನಸ್ಸಿಗಂತೂ ಬೇಡಿ ಬಿದ್ದಿದೆ ಎಂದು ತಿಳಿದುಕೊಳ್ಳಬೇಕು. ಬಡ ರಾಷ್ಟ್ರಗಳಿಗೆ ಸಹಾಯ ಕಳುಹಿಸುವುದು

ಎಂದರೆ, ಅವುಗಳ ಸುತ್ತ ಕುಣಿಕೆ ಇಳಿಬಿಡುವುದು ಎಂದರ್ಥ ಮಾಡಿಕೊಳ್ಳಬೇಕು. ಅಶಕ್ತ ರಾಷ್ಟ್ರಗಳ ರಕ್ಷಣೆಯ ವ್ಯವಸ್ಥೆ ಎಂದರೆ, ಅವುಗಳನ್ನು ಸ್ವಾಹಾಮಾಡುವ ಸಮಾರಂಭ ಎಂದು ತಿಳಿಯಬೇಕು. ಶಾಂತಿಗಾಗಿ ಒಂದು ಒಡಂಬಡಿಕೆಯಾದರೆ, ಅದು ಯುದ್ಧಕ್ಕೆ ನಾಂದಿಯೆಂದು ತಿಳಿಯಬೇಕು. ಶಾಂತಿ, ಸ್ವಾತಂತ್ರ್ಯಗಳ ಗದ್ದಲ ವಿರುವಲ್ಲೆಲ್ಲ ಅಶಾಂತಿ ಅಸ್ವಾತಂತ್ರ್ಯಗಳೇ ಇರುವುದು ಎಂದುಕೊಳ್ಳಬೇಕು. PEACE ಎಂಬ ಶಬ್ದಕ್ಕೆ ಇನ್ನುಮುಂದೆ WAR ಅಂತಲೇ ಅರ್ಥಮಾಡಿಕೊಳ್ಳಬೇಕು— ಅದು ಬೇಕಾದರೆ ತಣ್ಣಗೆ ಸದ್ದಿಲ್ಲದೆ ಕೊರೆಯುವ 'Cold war' ಇರಲಿ ಅಥವಾ ಸುಟ್ಟು ಉರಿಯುವ 'Hot war' ಇರಲಿ, ಚಿಂತೆಯಿಲ್ಲ. ಈ ರೀತಿ ದೃಷ್ಟಿ ಬದಲಾವಣೆ ಯಾದರೆ ಯಾವ ಬೇದಕ್ಕೂ ಅವಕಾಶವಿಲ್ಲ. ಹಾಗೆಯೇ 'ಪ್ರಜಾರಾಜ್ಯ' ಎಂಬುದಕ್ಕೆ ಪ್ರಜೆಗಳೇ ಇಲ್ಲದ ರಾಜ್ಯ ಅರ್ಥಾತ್ ಆಳಿಸಿಕೊಳ್ಳುವವರು ಯಾರೂ ಇಲ್ಲದೆ ಎಲ್ಲರೂ ಆಳುವವರೇ ಆದ ರಾಜ್ಯ ಎಂದು ತಿಳಿದುಕೊಂಡರೆ ಯಾವ ಮೂರ್ಖನೂ democracyಯನ್ನು ದೂಷಿಸಲಾರ.

"ಕಳೆದ ಕ್ರಿಸ್‌ಮಸ್ ವಾರದಲ್ಲಿ, ವಾಹನ ಸಂಚಾರದ ಒತ್ತಡದಿಂದುಂಟಾದ ಕೇವಲ ಚಿಲ್ಲರೆ ಅಪಘಾತಗಳಿಂದಲೇ ಅಮೇರಿಕದಲ್ಲಿ ೫೦೦ಕ್ಕಿಂತ ಹೆಚ್ಚುಮಂದಿ ಸತ್ತರಂತೆ. ಅಂದರೆ ಅಲ್ಲಿನ ಜನರು ಹಬ್ಬ ಆಚರಿಸುವ ವೈಭವ ಎಂಥದಿರಬೇಕು"— ಹೀಗೆಂದು ನಮ್ಮವರು ಯಾರಾದರೂ ಅಸೂಯೆಪಟ್ಟರೆ ತಪ್ಪಲ್ಲ. ಏಕೆಂದರೆ ಈ ಯುಗ ದಲ್ಲಿ ವಿನಾಶವೇ ಪ್ರಗತಿ. ಸಾವೇ ಸುಖ. ಸತ್ತವರಿಗೇ ಸ್ವರ್ಗ. ಹೀಗಿರುವಾಗ ಅಲ್ಲೊಮ್ಮೆ ರಾಜಾಜಿ, ಇಲ್ಲೊಮ್ಮೆ ಸಿ. ವಿ. ರಾಮನ್, ಬಾಂಬುಗಳನ್ನು ನೀರಿಗೆಸೆ ಯಿರೋ, ಜಗತ್ತನ್ನು ನಾಶಮಾಡಬೇಡಿರೋ ಎಂದು ಹುಯಿಲೆಬ್ಬಿಸುವುದು ಯಾವ ಪ್ರಗತಿಯ ಲಕ್ಷಣ? ಇದು ಪ್ರತಿಗಾಮಿತನವಲ್ಲವೇ. ಒಂದು ಕಾಲದಲ್ಲಿ ಪ್ರಗತಿಯ ಲಕ್ಷಣ ಬೇರೆ ಇದ್ದಿರಬಹುದು. ಈಗ ಹಾಗೆಯೆ?

"ಸಂಸ್ಕೃತಿ, ಧರ್ಮ, ಸತ್ಯ, ಅಹಿಂಸೆ, ಸೇವೆ ಮೊದಲಾದ ಮಾತುಗಳು ಮೊಳಗಿದ, ಮೊಳಗುತ್ತಿರುವ ನಮ್ಮ ದೇಶದ ಪರಿಸ್ಥಿತಿ ಕೂಡ ಹಾಗೆಯೇ. ಅದು ಇಂದಿನ ಯುಗಕ್ಕೆ ಹೊಂದಿಕೊಂಡಿದೆಯೇ ಹೊಂದಿಕೊಳ್ಳುತ್ತಿದೆಯೇ ಎಂದು ನೋಡಿಕೊಳ್ಳ ಬೇಕು. ಲೋಕವು ಪರಿವರ್ತನೆ ಹೊಂದಿದಂತೆ ಶಬ್ದಾರ್ಥಗಳೂ ಕೂಡ ಕಾಲಾನು ಕಾಲಕ್ಕೆ ಪರಿವರ್ತನೆ ಹೊಂದಬೇಕಾಗುತ್ತದೆ. "god bless you"— ಎಂದರೆ "ನಿನ್ನಮನೆ ಹಾಳಾಗ" "ನಿನ್ನ ಹುಲಿ ಹಿಡಿಯ" ಎಂಬುದೇ ಈಗಿನ ಅರ್ಥ. "god bless you" ಎಂಬವನು "you know what I mean" ಎಂದು ಕೇಳುವ ಪ್ರಸಂಗವೇ ಈಗಿಲ್ಲ. ಇದು ವೈಪರೀತ್ಯಗಳ ಯುಗ.

"ಹೀಗಿರುತ್ತ, ಹಳೆಯ ದೃಷ್ಟಿಯನ್ನೇ ಇಟ್ಟುಕೊಂಡು ಇಂದಿನ ಪರಿಸ್ಥಿತಿಗಾಗಿ ಪೇಚಾಡುವ ಐನ್‌ಸ್ಟೈನ್, ರಾಮನ್, ರಾಜಾಜಿಗಳು ಎಂಥ ಮೇಧಾವಿಗಳಪ್ಪ,

ಏನು ಮತಿವಂತರಪ್ಪ ಇವರು! ಇಂಥವರ ಅಭಿಪ್ರಾಯಗಳಿಗೆ, ಹಾಲಿವುಡ್ ನಟಿ ಹನ್ನೆರಡನೇಸಲ ವಿವಾಹ ವಿಚ್ಛೇದನೆಮಾಡಿಕೊಂಡ, ಅಥವಾ ಕೋಳಿಪಿಳ್ಳೆಗಳನ್ನು ಪಾಕಿಸ್ಥಾನಕ್ಕೆ ಸಾಗಿಸಿದ ಸುದ್ದಿಗಳಿಗಿಂತ ಹೆಚ್ಚಿನ ಮಹತ್ವ ದೊರೆಯದೆ ಹೋದರೆ ಆಶ್ಚರ್ಯವಿಲ್ಲ ..."

—ಪ್ರಾಣೇಶ ಇನ್ನೂ ಮುಂದುವರಿಸುತ್ತಿದ್ದ. ಸ್ವಿಚ್ ಹಾಕಿ ದೀಪ ಆರಿಸಿದ್ದ ರಿಂದ ನಮ್ಮ ಬೃಹಸ್ಪತಿಗೆ ಮಲಗುವ ಯೋಚನೆ ಬಂತು. ಆದರೆ ಅವನ ವಿಚಾರ ಸರಣಿ-ಹಾಳಾಗಿದ್ದು-ನಿದ್ರೆಯಲ್ಲಿಯೂ ಮೆದುಳನ್ನು ಕೊರೆಯಿತು.

— ರಾಮಕೃಷ್ಣ.

ತಂದೆಯ ತ್ಯಾಗ

ಇರಲಿ ನನಗೇ, ಎಲ್ಲ ಚಿಂತೆಗ
ಳೆಲ್ಲ ಭಾರವು, ಭುಜದಲಿ!
ಅತ್ತ, ಮನೆಯವರೆಲ್ಲ ಸುಖದಲಿ
ಮತ್ತರಾಗಲಿ, ನಗೆಯಲಿ.
ಸಾಲ ಸೋಲಿನ ಸಂಕಟ,
ಗೋಳು ನನಗೇ ಮೀಸಲು!
ಹೊಸಲಿನಾಚೆಯೆ, ಗಂಟನಿಡುವೆನು!
ಒಳಗೆ, ಸಂತಸ ಪಸರಿಸೆ
ನೋವು ನರಳು ಕೊರಗು ಕಷ್ಟಗ
ಳೆಲ್ಲ ನನ್ನ ಗಂಟಲಗಾಣವೆ.
ಮನೆಗೆ ನುಗ್ಗಿದಕೂಡಲೇ, ಮುಖ
ಉದ್ದವಾಗದೆ, ಮುದುರಲಿ!
ತಾಯಿ ಮಕ್ಕಳು ಎಲ್ಲ ನನ್ನನು
ಸುಖಿಯು ಎಂದೇ ತಿಳಿಯಲಿ.
ಮೋಸ ಜೀವನ ನನ್ನದೆಂದು
ಗೊತ್ತು, ನನಗೆ ದೇವನೆ!
ಆದರೂ, ಈ ತ್ಯಾಗದಿಂದ
ನೀನು ಮೆಚ್ಚಿದರಾಯಿತು.

— ಶಾಂಟಾಳಿ.

ಪಟುನೌಕರ ರಾಮು

(ಕುವೆಂಪು, ರವರ ಕ್ಷಮೆ ಬೇಡಿ.)

೧) ಸದ್ದಿಲಿಗತ್ತಲು ಕತ್ತಲದೆತ್ತಲು
ಪದ್ದುಮನೆಯಾ ಕಾಂಪೌಂಡ್ ಸುತ್ತಲು
ಮನೆಯಾ ಆಳ್ಗಳು ಸೊರ್, ಸೊರ್ ಗೊರಕೆಯ
ಸುಷಮ ಸುಷುಪ್ತಿಯೊಳಗಿಹರೈ.

೨) ಗೇಟಿನ ಬಾಯಿಗೆ ಬಿಗಿದಿಹ ಸರಪಳಿ
ತೂಗಿದೆ ಬೀಗವು ಬೊಗುಳಿದೆ ನಾಯಿಯು
ಆಹಾ! ಎಂತಹ ಭೀಕರ ಪರಿಸ್ಥಿತಿ
ಕಲ್ಲಿದೆ ಜನಗಳು, ಗತಿಏನೈ!

೩) ಮೆಲ್ಲನೆ ಎಗರಿದ ಗೋಡೆಯ ಹಾರಿದ
ಮೊಣಕೈ ತರಚಿತು ಪಂಚೆಯು ಹರಿದಿತು
ಅಸಮ ಸಾಹಸದಿ ಸಾರಿದ ರಾಮುವು
ನಲ್ಲೆಯ ರೂಮಿನ ಕಿಟಕಿ ಬಳಿ.

೪) ಟೊಕ್, ಟೋಕ್, ಟೊಕ್ಕನೆ, ಥಕ್, ಥಕ್, ಥಕ್ಕನೆ
ಥಪ್, ಥಪ್, ಥಪ್ಪನೆ, ಥಡ್, ಥಡ್, ಥಡ್ಡನೆ
ನಾನಾ ವಿಧದಲಿ ನುಡಿಸಿದ ಕಿಟಕಿಯ
ಕಠಿಣ ಮನಸ್ಕಳು ಬರದಿಹಳೈ!

೫) ರೇಗಿತು ರಾಮುಗೆ ಗಂಡೆದೆ ಕುದ್ದಿತು
ಆಕ್ಷಣ ಒಮ್ಮೆಲೆ ಪದ್ದೂ! ಎಂದನು
ಎಂಥ ಭಯಂಕರ ಕೂಗದು! ಕೇಳುತ,
ರಗ್ಗಲಿ ಬೆವತಳು ಸತಿಪದ್ದು.

೬) ಆದರು ಏಳದ ನಲ್ಲೆಯ ಧೈರ‍್ಯಕೆ
ಡಲ್ ಆದನು ನೆರೆ, ಮೂರ್ಛೆಯೆ ಹೋದನು
"ಗತಿಯೇಂ? ದೇವರೆ ತಪ್ಪೇ ಒಪ್ಪಿತ
ಎರಡನೆ ಆಟಕೆ ಹೋದೆನಲಾ!"

೭) ಪಶ್ಚಾತ್ತಾಪದಿ ತುಡಿಯುವ ಎದೆಯನು
ಎಡಗೈಲೊತ್ತುತ ಬಲಗೈ ನೀಡಿದ
"ಹಾ! ಕ್ಷಮಿಸೆನ್ನನು, ಪದ್ದು! ಅನಾರ್ಕಲಿ!
ಸಲೀಮನ ಮೇಲ್ದಯಮಾಡು!"

೮) ಒಡನೆಯೆ ಮೊಳಗಿತು ಒಳಗಿಂನುಡಿಗಳು
"ಸಲಾಂ! ಸಲೀಮರೆ! ಆಫೀಸ್ ಮುಗಿಯಿತೆ?
ಹೆಚ್ಚಿನ ಕೆಲಸದಿ ಬಳಲಿದಿರಲ್ಲವೆ!
ನೀವೇದಿಟ ಪಟು ನೌಕರರು."

೯) ಜೊತೆಗೇ ತೆರೆದಿತು ಹಿತ್ತಲ ಬಾಗಿಲು
ರಾಮುಗೆ ಸ್ವರ್ಗದ ಬಾಗಿಲ ತೆರದಲಿ
ಹೊಕ್ಕನು ಪಿಸುಕದೆ, ತಾಯಿಗೆ ಕಾಣದೆ,
ಹಾ! ಮಹರಾಯಿತಿ! ಎಂದು.

ಹೆಚ್. ಎನ್. ರತ್ನಬಾಯಿ.



ಮಿನೀಸ್ಟ್ರ ಮನೇಯಿಂದ ಮಾತಾಡ್ತಿರೋದು, ಬಿನ್ನೆ ನಾಲ್ಕು ಪೊಟಕ ಕಳಿಸಿ, ಡಾಕ್ಟರೇ !

ದಫೆದಾರ್ ದೇರಣ್ಣೋರು

" ಪ್ರೊ|| ಆಂಡ್ರೂಕ್ಲಿಯೋಸ್ "

"ರೈಟ್ ಅಬೌಟ್ ಟರ್ನ್ — ಕ್ವಿಕ್ ಮಾರ್ಚ್" ಅಂದಾಗ ನನಗೆ ನೇರವಾಗಿ ಮನೆ ಕಡೆಗೇ ಮಾರ್ಚ್ ಆಗೋಣವೇ ಅನ್ನಿಸುತ್ತಿತ್ತು" ಎಂದರು ದ|| ದೇರಣ್ಣೋರು ಓವರ್‌ಕೋಟು ಮತ್ತಷ್ಟು ಬಲವಾಗಿ ಹೊದ್ದು. ಸುಳಿಗಾಳಿ ಸುಯ್ ಎಂದು ಬೀಸಿ ಕಿವಿಯನ್ನು ಕೊರೆದು ನಡುಗಿಸುವ ವಾತಾವರಣ. ಪೋಲೀಸ್‌ಠಾಣೆಯ ಹೊರಗಿನ ಕಟ್ಟೆಯಮೇಲೆ ಕೂತಿದ್ದೆವು. ನಾನು ಮಫ್ಲರನ್ನು ಬಲವಾಗಿ ತಲೆಗೆ ಸುತ್ತಿ ಕುಕ್ಕುರುಗಾಲಲ್ಲಿ ಕೈಯನ್ನು ಮುಂಡಿಗೆ ಸುತ್ತಿ ಕುಳಿತಿದ್ದೆ.

"ನಮ್ಮ ಸಾವಂತ್ರಿ ಹೇಳ್ತೀನಿ—ಅವಳಿಲ್ದೆ ಇದ್ದಿದ್ರೆ ನಾನು ಇರ್‍ತಾಲೆ ಇರಲಿಲ್ಲ" ಎಂದರು ಮತ್ತೆ ಅವರೇ.

—ಎಲಾ ಎಲ್ಲಿಂದ ಎಲ್ಲಿಗೆ ಮಾತು. ದಫೆದಾರೀ ಟ್ರೈನಿಂಗಿಗೆ ಬೆಂಗಳೂರಿಗೆ ಹೋಗಿ ಅಲ್ಲಿನ ಅನುಭವದ ವಿಚಾರ ಹೇಳುತ್ತಿದ್ದವರು ಒಮ್ಮೆಲೇ ತಮ್ಮ ಅರ್ಧಾಂಗಿ ವಿಚಾರಕ್ಕೆ ಬಂದರಲ್ಲಾ ಎಂದು ನನಗೆ ಆಶ್ಚರ್ಯವೇ ಆಗಲಿಲ್ಲ ಏಕೆಂದರೆ ಯಾವ ವಿಚಾರ ಮಾತಾಡಲು ತೊಡಗಿದರೂ ಕಡೆಗೆ ಸೌ|| ಸಾವಂತ್ರಮ್ಮನವರ ಮಾತಿನಲ್ಲೆ ಮುಗಿಸುತ್ತಿದ್ದರೆಂಬ ದು ಲೋಕಕ್ಕೆ ಗೊತ್ತಾದ ಮಾತು.

"ಹೂಂ – ಸರಿ – ದಫೆದಾರ್‍ರೆ ಸರ್ಕಸ್ಸು ಬಂದಿದೆ ಊರಿಗೆ, ಹುಡುಗರು ನೋಡಬೇಕೂಂತ ಹಟಮಾಡಿದರು ....ಏನಂತೀರ"

"ಅವಕ್ಕೇನು — ಒಂದುಸಲ ಹೋಗೋಣ ಸಾವಂತ್ರೀನೂ ಹೋಗೋಣಾಂತ ಹೇಳಿದಳು, ಮೀನಾಕ್ಷಮ್ಮನೋರ್‍ನೂ ಕರಕೊಂಡು ಬನ್ನಿ ಮಜವಾಗಿ ಗ್ಯಾಲರಿಮೇಲೆ ಕೂತ್ಕೊಂಡು ನೋಡೋವ"

"ಗ್ಯಾಲರಿಮೇಲೆ?— ಏನು ದಫೆದಾರ್‍ರೆ ಪೋಲೀಸಿನೋರ ಪಾಸು ತೊಗೊಂಡು ಗ್ಯಾಲರಿಮೇಲೆ ಹೇಗೆ ಕೂಡೋದು ..ಕುರ್ಚಿ ಕೊಡ್ಸಿ ಸ್ವಾಮೀ"

"....ಕುರ್ಚಿ ಗಿರ್ಚಿ ಅವೆಲ್ಲಾ ಸುಖವಿಲ್ಲ ಸ್ವಾಮೀ – ಸಿಂಹ – ಹುಲಿ ಹತ್ತಿರವೇ ಬಂದು ಒಂದೊಂದುಸಲ ಸಲಾಕಿ ಸಂದೀಲಿ ಕೈಹಾಕಿ ಪರಚಿಬಿಡುತ್ವೆ ....ಹುಡುಗರು ಹೆಂಗಸರು, ಮಕ್ಕಳು ಅಪಾಯ — ನನಗೇನೋ ಪರವಾಗಿಲ್ಲ" ಎಂದು

—ತಕ್ಷಣ ಬೃಹತ್ ಓವರ್‌ಕೋಟಿನ ಒಳಜೇಬಿಗೆ ಕೈಬಿಟ್ಟು ಪಕೋಡದ ಪೊಟ್ಟ ಹೊರಕ್ಕೆ ತೆಗೆದು, ನನ್ನಕಡೆ ನೋಡಿ ಕಣ್ಣು ಚಿವುಟಿ ಈರುಳ್ಳಿ ಇದ್ದ ದೊಡ್ಡ ತುಕುಡ ಬಾಯಿಗೆಸೆದು ಅಗಿದು ಅದರ ಕಂಪನ್ನು ಆನಂದವಾಗಿ ಅನುಭವಿಸುತ್ತಾ ಹುಬ್ಬು ಏರಿಸಿ ಅರೆಗಣ್ಣು ಮುಚ್ಚಿದರು. ಈ ಮುಹೂರ್ತದಲ್ಲೇ ಅವರ ಬಾಯಿಂದ ಅದ್‌ಭುತ ಕಥನ ಹೊರಹೊಮ್ಮುತ್ತಿದ್ದುದು. ನಾನು ಬಾಯಿ ತೆರೆದು ಕಿವಿಯನ್ನು ಹಿಗ್ಗಿಸಿ ಅವರತ್ತ ಚಾಚಿ ಕುಳಿತೆ.

"ಹತ್ತೊಂಬತ್ತುನೂರಾ ನಲವತ್ತೆರಡು ಸ್ವಾಮಿ-ಇದೇ ಚಳಿದಿನ ಪ್ರೊ|| ಆಂಡ್ರೊಕ್ಲಿಯಾಸ್ ಸಿಂಹಕ್ಕೆ ಹಲ್ಲುಜ್ಜಲು ಬ್ರೆಷ್ಷು ಹಲ್ಲುಪುಡಿ ಕೊಟ್ಟ .. ...."

"....ಸಿಂಹಕ್ಕೆ ಹಲ್ಲುಜ್ಜೋದೂ ಇದೇನು ಸ್ವಾಮಿ ಹುಡುಗಾಟ"

"ಹುಡುಗಾಟವಲ್ಲ ಕೇಳ್ರೀ ಹೇಳೋದನ್ನಾಂದ್ರೇ ...."

— ಎಂದು ರಾಗ ಎಳೆದು ಬಾಯಿ ತೆಗೆದಾಗ ಅವರ ಕೋಪ ಶಮನವಾಗಲೆಂದು ಇಡೀ ಎರಡು ಗೋಡಂಬಿ ತುಂಡಿರುವ ಪಕೋಡವನ್ನು ಅವರ ಬಾಯಿಗೆಸೆದೆ. ಕರುಂ ಕುರಂ ಎಂದು ಚಪ್ಪರಿಸಿ ಮತ್ತೆ ಪ್ರಾರಂಭಿಸಿದರು

"ಆಯ್ತೇ....ನಾ ಹೇಳ್ತಿನಿ ಇದಲ್ಲದೆ ಮತ್ಯಾವುದು ಸ್ವರ್ಗಸುಖಾಂತ...."

"ಯಾವುದು ದಫೇದಾರ್ರೇ"

"ಇದೇ ಪಕೋಡದ ಹದಕ್ಕೆ ಬಾಯಲ್ಲಿ ನುರಿಯುವ ಗೋಡಂಬಿ ತುಂಡು ಈ ಖಂಮ್ಮನೆಯ ಕಂಪು ಸ್ವರ್ಗಕ್ಕೆ ಕಿಚ್ಚು ತರುವ ವಿಚಾರ"

"ಹಹಹ....ಪಕೋಡ ಪ್ರಿಯರೆಂದರೆ ನೀವೇಕಣ್ರಿ....ಅದಿರ್ಲಿ ಆ ಪ್ರೊ|| ಆಂಡ್ರೊಕ್ಲಿಯಾಸ್‌ನ ವಿಚಾರ ಮುಂದುವರಿಸಿ...."

"ನಾನು ಮುಂದುವರಿಸೋಕೆ ನೀವು ಬಿಟ್ರೆತಾನೆ ...ಹೂಂ ಕೇಳಿ ಆ ಪ್ರೊಫೆಸರ್ ಆಂಡ್ರೊಕ್ಲಿಯಾಸ್ ಬಹು ಖಯಾಲಿ ಇಸಮು. ಹಿಂದೆ ಒಂದುಸಲ ಉಲಿ ಷಿಕಾರಿ ವಿಚಾರ ಹೇಳಿದ್ದೆ ನೆನಪಿದೆಯೆ?"

"ಆ ಕೆಲ್ಡೋಡು ಕಿಲಾಡಿ ಕರಡಿ ಕಥೆ ಮರಿಯೋದುಂಟೆ"

"ಆಗ ಹೇಳಿದಾಗ ಹೊಸದುರ್ಗದಲ್ಲಿನ ಹರುಕು ಢೇರೆ ಸರ್ಕಸ್ಸಿನ ರಿಂಗ್ ಮಾಸ್ಟರ ವಿಚಾರ ಹೇಳಿದ್ದೆ ನೋಡು ಅವನ ದೊಡ್ಡಪ್ಪನೇ ಈ ಆಂಡ್ರೊಕ್ಲಿಯಾಸ್"

"ಓ ಹೊ ಹೋ....ಸರ್ಕಸ್ಸಿನ ಮನೆತನಾನ್ನಿ ಅದು"

"ಹೌದು ಅನೇಕ ಕಾಡುಮೃಗಗಳನ್ನು ನಾನು ಅವರುಗಳ ಸರ್ಕಸ್ಸಿಗೆ ಮಾರಿದ್ದೇನೆ— ಆದರೆ ಆಂಡ್ರೊಕ್ಲಿಯಾಸ್‌ಗೆ ಒಂದು ಹೆಣ್ಣುಸಿಂಹ ಕುದುರಿಸಿಕೊಟ್ಟಿದ್ದು ಸ್ವಾರಸ್ಯವಾಗಿದೆ— ಕೇಳಿ. ಆಂಡ್ರೊಕ್ಲಿಯಾಸ್ ಅಂದರೆ ಯಾವನೋ ಕ್ರಿಸ್ತಿಯಾನಂತ ತಿಳಿಬೇಡಿ— ಕೃಷ್ಣಪ್ಪನಿಗೆ ಕಣ್ಣು ಕೊಂಚ ಕುರುಡು ಪಾಪ"

"ಕೃಷ್ಣಪ್ಪ? ಇವ ಯಾರು ಸ್ವಾಮಿ ಆಂಡ್ರೂಕ್ಲಿಯಾಸ್‌ನಿಂದ ಕೃಷ್ಣಪ್ಪನಿಗೆ ಹಾರಿದಿರೀ........"

"ಅರೇ ಕೇಳಬಾರದೇನ್ರೀ ಆಡುಗೋಡು — ಅನೇಕಲ್ಲು ಅಂಧಾಪುರಾಂತ ಕೇಳಿಲ್ವೇ — ಆ ಪೈಕಿ ಅಂಧಾಪುರದವ ಈ ಕೃಷ್ಣಪ್ಪ. ಕಣ್ಣು ಐಬೂಂತ ತಿಳೀದವರು ಹೆಣ್ಣುಕೊಡೋಕೆ ಬಂದಾಗ ಅವ ಅಂಧಾರಿ, ಅಂದಿದ್ದ ಹೆಣ್ಣು ಹಡೆದವನ ಹಿತ್ತೈಷಿ. ಆಗಿನಿಂದ ಅಂಧಾ ಕೃಷ್ಣಪ್ಪ, ಅಂಧಾಪುರಿ ಕೃಷ್ಣ, ಅಂಧಾರಿ ಕೃಷ್ಣ ಈ ಅಪಭ್ರಂಶ ವಾಗಿ ಈತನೇ ಮುಂದೆ ಸರ್ಕಸ್ಸು ತೆಗೆದಾಗ ಹೆಸರು ಆಂಧ್ರೂಕ್ಲಿಷ್ಟ್‌ನಿಂದ ಆಂಡ್ರೂಕ್ಲಿಯಾಸ್‌ಗೆ ಬಂದು ನಿಂತಿತು. ಅದೇ ಹೆಣ್ಣು ಪ್ರಮೀಲೆಯನ್ನು ಆಗಬೇಕೆಂದು ಬಯಕೆ ಈ ಯುವಕನಿಗೆ"

"ಓಹೊಹೊ....ಒಳ್ಳೆ ಸಂಶೋಧನೆ ನಡೆಸಬೇಕು ಈ ಹೆಸರಿನ ಮೂಲಕ್ಕೇನ್ನಿ"

"ಹೂಂ ಕೇಳಿ — ನಮ್ಮ ಆಂಡ್ರೂಕ್ಲಿಯಾಸ್ಸು ಸಿಂಹನ ಬಾಯಲ್ಲಿ ತಲೆ ಇಡುವ, ಅದರ ಬಡನುಡುವನ್ನು ಚಪ್ಪರಿಸುವ, ಬಾಲವನ್ನು ತಿರುಚಿ, ಕೇಸರಿಯನ್ನು ಕೆಣಕುವ, ಅದರೊಂದಿಗೆ ಸೆಣಸುವ ಆದರೇ.....(... "

"ಆದರೇನು ದಫೆದಾರ್ರೇ"

"ಆದರೇನು — ಆಗದಿದ್ದರೇನು ಈ ಶೂರ ಧೀರ ಗಂಭೀರ ಸಾಹಸಿಗ ಮನೆ ಸೇರಿದನೆಂದರೆ ನಾಯಿಮರಿ. ಮನೆಯಲ್ಲಿ ಆರ್ಭಟಿಸುವ ಹೆಣ್ಣುಸಿಂಹಿಣಿ — ಇವನ ಅರ್ಧಾಂಗಿ ಪ್ರಮೀಲೆ ಮುಂದೆ ಶಿಂಗನಮರಿ ಈ ಅಂಧಕೃಷ್ಣ"

"ಹ ಹ ಹ ... ಚೆನ್ನಾಗಿದೆ ಕಥೆ....ಆಮೇಲೆ"

"....ಅದಕ್ಕೆ ನಿಮಗೆ ನಾನು ಹೇಳೊಲ್ಲ ಏನೂ ಅನ್ನೋದು....ಇದು ಕಥೆ ಅಲ್ರೀ ನಡೆದದ್ದು; ನಾನು ಹೇಳೊಲ್ಲ ಹೋಗಿ...."

"ನಿಮ್ಮ ದಮ್ಮಯ್ಯ — ತಪ್ಪಾಯ್ತು ದಫೇದಾರ್ ದೇರಣ್ಣೋರೆ ಹೇಳಿ.... ಮುಂದಕ್ಕೆ" ಎಂದು ಇಂತಹ ಸಂದರ್ಭ ಬಂದಾಗ ಎದುರಿಸುವ ಸಲುವಾಗಿಯೇ ತಂದಿದ್ದ ಹಸನ್ ಆಕಳ ತುಪ್ಪದಲ್ಲಿ ಕರಿದ ತಾಜಾ ಗುಂಡಪ್ಪನ ಹೋಟಲು ಪಕೋಡದ ಅರ್ಧಸೇರಿನ ಪೊಟ್ಟಣ ಬಿಚ್ಚಿ ಮುಂದೆ ಹರಡಿದೆ. ಪ್ರಸನ್ನವದನ್ನಾಯಿೀ (....ಕರುಂ ಕುರುಂ ಸ್ವಾಹಾ ...ಮಧ್ಯೆ ಮಧ್ಯೆ ಗೋಡಂಬಿ ನೇವಿದ್ಯಾ.... ಈ ಸೇವೆ ನಡೆದಮೇಲೆ ಸತ್‌ಕಥಾ ಪ್ರಾರಂಭವಾಯ್ತು—

"ಆ ಆಂಡ್ರೂಕ್ಲಿಯಾಸ್ ಪಾಪ ಅನೇಕದಿನ ಮದುವೆ ಕಾಣದೆ ಪೇಚಾಡಿದ. ಒಂದು ಕಾಲದಲ್ಲಿ ಅವನಿಗಾಗಿ ಬ್ರಹ್ಮ ಹೆಣ್ಣನೇ ಸೃಷ್ಟಿಸಿರಲಿಕ್ಕಿಲ್ಲವೆ? ಎಂಬ ಸಂದೇಹ ತಲೆದೋರಿತ್ತು. ಮನುಷ್ಯ ವಿಲಿವಿಲಿ ಒದ್ದಾಡಿದ. "ಅಯ್ಯೋ ಅಂಧಾರೀ ("

ಅಂದು ತಪ್ಪಿಹೋದ ಹೆಣ್ಣು ಪ್ರಮೀಲೆಯನ್ನೆ ಆಗಬೇಕೆಂದು ಇವನ ಹಟ. ಆ ಹುಡುಗಿಯೇನೋ ಹೂಂ ಅನ್ನುತ್ತಿತ್ತೇನೊ — ಅವಳ ಸೋದರಮಾವ ಈ ಕುರುಡನಿಗೆ ಕೊಡೋಕಿಂತ ಹುಡುಗೀನ ಸಿಂಹದ ಬಾಯಿಗೆ ಕೊಡಿ ಅಂದಿದ್ದ. ಇದನ್ನು ಕೇಳಿದ ಆಂಥ್ರೊಕ್ಲೀಯಾಸ್ ಛೆ ಆ ನನ್ನ ಪ್ರೀತಿಯ ಹೆಣ್ಣು ಹಾಗೆ ಮಾಡುವುದೇ ನಾನು ಇದ್ದರೇನು ಹೋದರೇನು ಎಂದು — ಸಾಹಸದ ಸರ್ಕಸ್ಸಿಗೆ ಸೇರಿದ — ಕಬ್ಬಿಣದ ಸರಳಿನ ಪಂಜರದಲ್ಲಿ ಸಿಂಹದೊಡನೆ ಸೆಣಸಿ ಸಾಯಲು ಸಿದ್ಧನಾದ—ಆ ಮುದಿಸಿಂಹದ ಬಾಯಿ ತೆಗೆಸಿ ತಲೆ ಇಟ್ಟ...."

"....ಅದು ಕಚ್ಚಿ ತಿನ್ನಲಿಲ್ಲವೆ?"

"ಎಲ್ಲಾದರೂ ಉಂಟೇ ನಾನೇ ಆ ಸಿಂಹ ಸರ್ಕಸ್ಸಿಗೆ ಹಲ್ಲುಕಿತ್ತು ಮಾರಿದ್ದೆ.... ಆದರೂ ಕೃತಕ ಬಿಳೀ ರಬ್ಬರ್ ಹಲ್ಲು ಕಟ್ಟಿಸಿದ್ದರು ಸರ್ಕಸ್ ಕಂಪನಿಯವರು — ಆ ಸಿಂಗರಾಜನಿಗೂ ದಿನವೂ ಆಡಿದ್ದೇ ಆಟ ಆಡಿ ಆಡಿ ಬೇಸರಬಂದಿತ್ತು — ಅದರ ಬಾಯಲ್ಲಿ ಯಾರು ಕತ್ತಿಟ್ಟರೂ ಕುಯಕ್ ಅನ್ನುತ್ತಿರಲಿಲ್ಲ — ಬಡನಡು ತೀರಬಡವಾಗಿತ್ತು ಬರೀ ಬುತ್ತಿ ಅನ್ನವೆಂದು. ಛೆ ಇದೆಂಥಾ ಬಾಳು ಪ್ರಮೀಲೆಯೂ ಇಲ್ಲ ಜೀವವೂ ಹೋಗಲಿಲ್ಲ ಎಂದು ಎತ್ತರದ ಜೋ ಕಾಲಿಯಿಂದ ಬಿದ್ದ ಆದರೆ ಕೆಳಗೆ ಬಲೆ ಬಲೆ ಕಟ್ಟಿದ್ದರು, ಬದುಕಿದ — ಆನೆಯ ಕೆಳಗೆ ಮಲಗಿದ ಅದಕ್ಕೂ ತುಳಿಯದಂತೆ ಪಾಠಕಲಿಸಿದ್ದರು — ಹುಲಿ ಹಲ್ಲು ಉಜ್ಜಿದ — ಅದೂ ಕೃತಕ ಬಿಳೀ ರಬ್ಬರಿನದೇ.... ದೇವರು ದೊಡ್ಡವನು. ನನ್ನನ್ನು ಪ್ರಮೀಲೆ ತಂದೆ ಮನೆಗೆ ಕರೆಸಿಕೊಂಡ. ಪ್ರಮೀಲೆಗೆ ಸಕತ್ ಖಾಯಿಲೆ ನನಗೆ ಕೊಂಚ ವೈದ್ಯಕೀನೂ ಬರುತ್ತೇನ್ನಿ"

"ಅರೆ! ಹೌದಾ ನನಗೆ ಗೊತ್ತೆ ಇಲ್ವಲ್ರೀ"

"ನಾನು ಮನೋರೋಗ ವೈದ್ಯ ಮಾತ್ರ — ರಣಪಂಡಿತನಲ್ಲ ಸ್ವಾಮಿ—ಕೇಳಿ ಮುಂದೆ ನಾನು ಹೇಳಿದೆ ಪ್ರಮೀಲೆ ಅಪ್ಪನಿಗೆ 'ಜಿಯ್ಯಾ ಇದು ಮಹಾ ಪ್ರಚಂಡ ರೋಗ — ಸಿಂಹದ ಹಲ್ಲು ಸಾಣೆಕಲ್ಲುಮೇಲೆ ತೇದು ಹಣೆಗೆ ಪಟ್ಟುಹಾಕಬೇಕು' ಅಂತ ಹೇಳಿದೆ. ದಿಕ್ಕಿಲ್ಲದೆ ಆ ಮಹಾಗರ್ವಿ ಪ್ರಮೀಲೆ ಜನಕ ಮೊಳಕಾಲೂರಿ ಆಂಥ್ರೊಕ್ಲೀಯಾಸನನ್ನು ಬೇಡಲೇಬೇಕಾಯ್ತು — ಅವನೂ ಮೊದಲು ರೇಗುಹಾಕಿ ಕಡೆಗೆ ಇಂಥದೇ ಚಳಿದಿನ ಸಿಂಹದ ಹಲ್ಲುಪುಡಿಹಾಕಿ ಉಜ್ಜಿ ಕಿತ್ತು ತಂದು ಪ್ರಮೀಲೆಯ ಖಾಯಿಲೆ ವಾಸಿಮಾಡಿ ತಾಳಿಕಟ್ಟಿ ಕರೆದುತಂದ ಆದರೇ ಪ್ರಮೀಲೆ ಎಂತಹ ಸಿಂಹಿಣಿ ಎಂದು ತಿಳಿದದ್ದು ಮನೆಗೆ ಬಂದಮೇಲೇ .. ಅವಳದೇ ಕೈಮೇಲು — ಪ್ರೀತಿ ಪ್ರೀತಿ ಎಂದು ತಲೆಮೇಲೆ ಕೂಡಿಸಿಕೊಂಡ ಅವಳು ಬಿಡ್ತಾಳೆಯೇ ಜುಟ್ಟು ಹಿಡಿದಳು. ಅವಳದೂ ಬಡನಡು ಆದರೆ ಆಂಥ್ರೊ ನೋಡಿಯೇ ದಣಿಯಬೇಕು ನೇವರಿಸಿದರೆ ಸಿಡಿದು ಬೀಳುವಳು — ಅವಳದೂ ನೀಳ ಕೇಸರಿಯಂಥ ಕೇಶರಾಶಿ ಆದರೇ ನೋಡಿಯೇ ಸಿಟ್ಟುಸಿರುಬಿಡುವ — ಅವಳೇ ಅನ್ನುತ್ತಿದ್ದಳು ಅವನಿಗೆ 'ಚಿಲ್ಲು ಚಿಲ್ಲು....ಸದಾ ನನ್ನ ಮುಂದೇ ಇದ್ದರೆ ಹೇಗೆ—ಸರ್ಕಸ್ಸು ಮಾಡುವಾಗ ಮಡದಿ ಚಿಂತೆಮಾಡಬಾರದು—

ಮನೆಯಲ್ಲಿ ಮಡದಿಯೊಡನಿದ್ದಾಗ ಸರ್ಕಸ್ಸುಮಾಡಬಾರದು ತಿಳೀತೆ,' ಎಂದು ತಿದ್ದುವಳು ...ಒಟ್ನಲ್ಲಿ ಗಂಡ ಹೆಂಡ್ತಿ ಅನ್ಯೋನ್ಯವಾಗಿದ್ದಾರೆ....ಇದೇ ನೋಡು ನನ್ನ ಸ್ನೇಹಿತ ಅಂಡ್ರೂಕ್ಲಿಯಾಸ್‌ನ ಕಥೆ"

"....ಕಥೆ!....ಕಥೆ ಅಲ್ಲಾಂದ್ರೀ...."

"ನಡೆದ ಕಥೆ ಕಣ್ರೀ....ಹೂ ಹೊತ್ತಾಯ್ತು ನಾಳೆ ಸರ್ಕಸ್ಸಿಗೆ ಹೋಗೋಣಂತೆ ಸಾವಂತ್ರಿನೂ ಬರ್ತಾಳೇನೋ ಕೇಳೋವ ಮೀನಾಕ್ಷಮ್ಮನೋರ್ನೂ ಕರ್ಕೊಂಬನ್ನಿ...."

—ಎಂದು ಉಳಿದ ಪಕೋಡ ತಿಂದು ಎದ್ದರು — ಪ್ರೊ|| ಅಂಧ್ರೂವನ್ನು ನೆನೆದು ಮನೆ ಸೇರಿದೆ.

— ದಾಶರಥಿ ದೀಕ್ಷಿತ್.



ಆವಡಿ ಕಾಂಗ್ರೇಸ್ ಹೊತ್ತಿಗೆ ಬಟ್ಟೆ ತರದೇನೇ ಈಗ ಬರ್ತಾ ಇದ್ದಿಯಲ್ಲೋ! ಅನ್ಯಾಯಕಾರ!!

ಕಿಂಕಾಫೆಟಬ್ವಾ ಮೇಕಪ್

ಬಾಯಿ ನೀರೂರಿಸುವ ವಯಸ್ಸು, ಎಂಥವನನ್ನಾದರೂ ಬಗ್ಗಿಸುವ ರೂಪು. ಆದರೆ ಹರಿದ ಕುಬುಸ, ಅಲ್ಲಿ ಇಲ್ಲಿ ತೇಪೆಹಾಕಿದ ಸೀರೆ, ಜಾಗರೂಕತೆಯಿಂದ ಕೆದರಿಸಿಕೊಂಡ ಹೆರಳು, ಹರಿದ ಚಪ್ಪಲೀ ...ಒಂದು ತರಹೇ ಜಿಗುಪ್ಸಾಭರಿತ ನೋಟ, ಮುಗ್ಧೆ....

ಮಗದೊಂದು ಸಾರಿ ಆಕೆ ಕಡೆ ಕಣ್ಣು ಹೊರಳಿಸೋಣವೆನಿಸಿತು. ನೋಡಿದಷ್ಟು ಮಾತನಾಡಿಸೋಣವೆನಿಸಿತು. ಆದರೇ ಯಾವ ಹೂಗಿಡದ ಕೆಳಗೆ ಯಾವ ಹಾವೋ .. ಎಂಬ ಭಯ.

ಯಾರೋ ಅನಾಥ ಬಾಲೆಯಿರಬಹುದು, ಯಾರಮನೆಯಲ್ಲೋ ಮುಸುರೇ ತಿಕ್ಕುವಳಿರಬಹುದೂ, ತರ್ಕಾರಿ ತರುಕ್ಕೇ ಇಲ್ಲೆಲ್ಲೋ ಬಂದಿರಬಹುದೋ!....ಭಗವಂತನು ಕೆಲವುಸಾರಿ ನಿಷ್ಕರುಣೀ. ತಲೇತುಂಬಾ ಚಂದ್ರಾ, ನೋಡಗಳೂ.... ನನಗೇ ನನಗೊಬ್ಬನಿಗೇ ಏನು, ನನ್ನಂತೆ ಕ್ಯೂನಲ್ಲಿ ನಿಂತಿದ್ದ ಎಲ್ಲರಿಗೂ ಹಾಗೇ ಇರಬೇಕು....ಎಲ್ಲರಕಣ್ಣು ಆಕೆಯು ಕಡೆಗೇ ಇತ್ತು.

ಅಷ್ಟರಲ್ಲಿ, ಒಂದು ಮಾತಾಳಿ ಮುದುಕಿ ಓಡಿಬಂತು ಬಸ್ಸಿಗಾಗಿ. ಕ್ಯೂ ಬಿಟ್ಟು ನಿಂತಿದ್ದ ಆ ಹುಡುಗಿಯನ್ನ ಕುರಿತು "ಬಾಮ್ಮ ಕ್ಯೂನಲ್ಲಿ ನಿಂತುಕೋ....ಜನ ಬಂದುಬಿಡ್ತಾರೆ ...ನಿನಗೆ ಸೀಟು ಸಿಗೊಲ್ಲಾ....ಯಾರ ಮಗಳು ನೀನು, ಎಲ್ಲಿ ಕೆಲಸ ಮಾಡ್ತೀ ?"

ಇಲ್ಲ ಅಜ್ಜೀ.... ಏನೂ ಪರವೇ ಇಲ್ಲ ನಾನು ಬಸ್ಸಿಗೆ ನಿಂತಿಲ್ಲ ಇಲ್ಲಿನ ದೊಡ್ಡ ಕಾಲೇಜೀನ ಮನಶ್ಯಾಸ್ತ್ರದ ಪ್ರೊಫೆಸರ್ ರಂಗರಾವ್ ಕೇಳಿದ್ದೀರ... ನಮ್ಮ ತಂದೇ.... ಇಲ್ಲವೇ? ಹೋಗಲೀ Beauty specialist Mrs. ಶಶಿರೇಖ ಕೇಳಿದ್ದೀರ.... ಅವರು ನಮ್ಮ ತಾಯೀ ...ಈ ಬಸ್ಸು ಸ್ಟಾಪ್ ಹತ್ತಿರ ಕಾದಿರ್ತೇನೇ ಅಂತ ಹೇಳಿದ್ದೇ ನಮ್ಮ ಕಾರಿಗೋಸ್ಕರ ಕಾದಿದ್ದೇನೇ....

"ಮತ್ಯಾಕಮ್ಮ ಹೀಗಿದ್ದೀ?"....

"ಇಲ್ಲ ಅಜ್ಜೀ, ಇದಕ್ಕೇ "ಕಿಂಕಾಫೆಟಬ್ವಾ ಮೇಕಪ್" ಅಂತಾರೆ....

—ಶೀ.

ಕೋಪ ಪರಿಹಾರೋಪಾಯ

ಕೈಹಿಡಿದ ಹೆಂಡತಿ ಕೋಪಿಸಿಕೊಂಡು ಕೂತರೆ, ಗತಿಏನು? ಗಂಡಸು ಎಂಬ ವರ್ಗದ ಪಾಡೇನು? ಮ್ಯಾನ್ ಎಂಬುವರ ಮರ್ಯಾದೆ ಎಲ್ಲಿಗಿಳಿಯಿತು? ನನಗಂತೂ ಇದು ನಿತ್ಯಗಂಡ; ಮನೆಯಲ್ಲಿ ದಿನವೂ ಮಾರಿ ಮಾರನಮೇಲೆ ಮಾರಾಮಾರಿ.

ಆದ್ದರಿಂದ, ನಾನು ನಮ್ಮ ಬಡಾವಣೆಯಲ್ಲಿ ವಾಸವಾಗಿರುವ ನೂರಾರು ಸಂಸಾರಗಳ ಸ್ಥಿತಿಗತಿಗಳನ್ನು ಸಂಶೋಧಿಸಿ, ನನ್ನಂತೆಯೇ ನರಳುತ್ತಿರುವ ನೂರಾರು ನರಪಶುಗಳನ್ನು ವಿಚಾರಿಸಿ ಇದಕ್ಕೆ ತಕ್ಕ ಪರಿಹಾರ ಹುಡುಕೋಣವೆಂದು ತೀರ್ಮಾನಿಸಿದೆ. ಎಲ್ಲರನ್ನೂ ಉದ್ವಕ್ಕೂ ದೈನ್ಯದಿಂದ ವಿಚಾರಿಸುತ್ತ ಬಂದೆ; "ಸ್ವಾಮಿ! ಹೆಂಡತಿ ಜಗಳವಾಡಿದರೆ, ನೀವು ಅವಳನ್ನು ಹೇಗೆ ಸಮಾಧಾನಪಡಿಸಿ ತಹಬಂದಿಗೆ ತರುತ್ತಿದೀರಿ? ನಾನು ಮೊನ್ನೆ ಹೊಸದಾಗಿ ಸಂಸಾರ ಹೂಡಿರುವ ಗಂಡು," ಎಂದೆ.

ಎಂಟು ಹತ್ತು ಜನರು ನನ್ನನ್ನು ಗೇಟಿನಾಚೆವರೆಗೂ ಕತ್ತುಹಿಡಿದು ದಬ್ಬಿದರು; ಒಬ್ಬಿಬ್ಬರು ಡಾ॥ ಗೋವಿಂದಸ್ವಾಮಿ ಎಂಬ ಹೆಸರಿನವರೊಬ್ಬರಿದಾರೆ, ಅವರಲ್ಲಿಗೆ ಹೋಗಿ, ಎಂದರು, ಹತ್ತೂರು ಪತಿಗಳು ನನ್ನನ್ನ ಒಳಕ್ಕೆ ಕರೆದು ಕೂಡಿಸಿ ಕಾಫಿಕೊಟ್ಟು, ತಮಗೂ ಅದೇಸಮಸ್ಯೆ ಬಲವಾಗಿದೆಯೆಂದೂ ನನ್ನ ಸಂಶೋಧನೆ ಮುಗಿದನಂತರ ನಾನು ಅವರಿಗೆ ನನ್ನ ಅಮೂಲ್ಯ ಸಲಹೆಗಳನ್ನು ನೀಡಬೇಕೆಂದೂ ಕೈಮುಗಿದು ಕೇಳಿಕೊಂಡರು; ಮೂರುನಾಲ್ಕು ಜನರು ಮನೆಯಲ್ಲಿ ಹೆಂಗಸರಿಲ್ಲದವೇಳೆ ಬನ್ನಿ ಎಂದರು.

ಇನ್ನು ಕೆಲವರು, 'ಜಗಳ' ಎನ್ನುತ್ತೀರಲ್ಲಾ, ಯಾವರೀತಿಯ ಜಗಳ? ಯಾವ ಕಾವಿನ ಕಲಹ? ಜಗಳ ಎಂದರೆ ವಾಗ್ವಾದವೆ? ಕೈ ಕೈ ಮಿಲಾಯಿಸಬೇಕೆ? ಜುಟ್ಟು ಕೀಳಬೇಕೆ? ಕೆನ್ನೆ ಕೆಂಚಗಾಗಬೇಕೆ? ಮಾತಾಡದೆ ಹೆಂಡತಿ ಮೌನವಾಗಿದ್ದರೆ ಅದಕ್ಕೆ ಜಗಳವೆನ್ನೋಣವೆ, ಸ್ವರ್ಗವೆನ್ನೋಣವೆ? ನಿಷ್ಕಾರಣವಾಗಿ ಮಕ್ಕಳನ್ನು ಆಕೆ ಹೊಡೆದರೆ ಸಾಕೆ? ಬಾಗಿಲಿಗೆ ಬೀಗ ಬಡಿದು ಆಕೆ ಎಲ್ಲಿಗಾದರೂ ಹರಟೆಗೆ ಹೊರಟರೆ ಅದು ಜಗಳದ ಪೀಠಿಕೆಯೆ? ಹಾಲೊಡೆದುಹೋಯಿತು ಎಂದರೆ, ಅದರ ಅರ್ಥ, ಜಗಳವೆ? ಆರಿದ ಕಾಫಿ ಬೇಯದ ಅನ್ನ ಉಪ್ಪುಸಾರು ತೂತಿನ ಎಲೆ ಹೆಚ್ಚು

ಸುಣ್ಣ ಸವರಿದ ವೀಳ್ಯ ಇವೆಲ್ಲ ಜಗಳದ ಕುರುಹುಗಳೆ? ಅಥವಾ, ನಮ್ಮ ಮೇಜಿನ ಮೇಲೆ ನಾವು ಕಾಣುವಂತೆ ಆಕೆ ಅವಿಶ್ವಾಸದ ಠರಾವನ್ನೊಳಗೊಂಡು ಒಂದು ಪತ್ರವನ್ನೇ ಬರೆದಿಡಬೇಕೆ?....ಹೀಗೆ ನನ್ನನ್ನು ಬಹುವಾಗಿ ಪ್ರಶ್ನಿಸಿದರು. ಲೋಕೋ ಭಿನ್ನರುಚಿಃ, ಎಂಬುದು ಅರ್ಥವಾಯಿತೇ ಹೊರತು, ಕೆಟ್ಟಿತಲೆ ಇನ್ನಷ್ಟು ಕೆಟ್ಟಿತೇ ಹೊರತು, ನನಗೆ ಅವರಿಂದ ಕೊಂಚವೂ ಬೆಳಕು ದೊರೆಯಲಿಲ್ಲ.

ಆದರೆ, ಅನೇಕರು ನನ್ನೊಂದಿಗೆ ಸಹತಪಿಸಿ, ತಮ್ಮ ಸಂಕಟವನ್ನು ತೊಡೀ ಕೊಂಡರು. ತಾವು ತಮ್ಮ ಮಡದಿಯರ ಮನವನ್ನೊಲಿಸಲು ಅನುಸರಿಸುವ ಚಾಣಕ್ಯ ತಂತ್ರಗಳನ್ನು ನನಗೆ ವಿಶದೀಕರಿಸಿದರು. ಅವೇ ಮಾರ್ಗಗಳಿಂದ ಅವರು ನನ್ನ ಹೆಂಡತಿಯನ್ನೂ, ನಾನು ಒಪ್ಪಿದರೆ, ಒಲಿಸಲು ಸಿದ್ಧರಿರುವುದಾಗಿಯೂ ಹೇಳಿದರು? ಆದರೆ, ಅಂತಹ ಪೋಲಿಗಳ ಹೊಸಲನ್ನು ನಾನು ಬೇಗ ತ್ಯಜಿಸಿದೆ, ಎನ್ನಿ.

ನನ್ನ ಸಂಶೋಧನೆಯಿಂದ ಅನೇಕ ವಿಷಯಗಳು ಸ್ಪಷ್ಟವಾದುವು; ಬೆಂಗಳೂರು ಮುಂತಾದ ದೊಡ್ಡ ಶಹರುಗಳಲ್ಲಿ ಮಡದಿಯರ ಕೋಪ ಶಮನಕ್ಕೆ ಹೋಟಲುಗಳಿಂದ ಪೊಟ್ಟಣಗಳು, ಸಿನಿಮ ಪ್ರದರ್ಶನ, ಟ್ಯಾಕ್ಸಿ ಸವಾರಿ, ಇವು ತುಂಬಾ ಫಲಕಾರಿ. ಸತ್ಯಾಗ್ರಹದ ಮಹತ್ವದಿಂದ ಗ್ರಾಜುಯೇಟುಗಳಲ್ಲದ ಹೆಂಡತಿಯರನ್ನು ಒಂದೆರಡು ದಿನಗಳಲ್ಲೇ ಹೆದರಿಸಿ ಪಳಗಿಸಬಹುದಂತೆ. ಗೇಟಿನಾಚೆ ಕೂತುಬಿಡುವುದು, ಮನೆ ಮುಂದಿನ ಸಂಪಿಗೆ ಮರದಮೇಲೆ ಕುಕ್ಕುರಿಸುವುದು, ಅತ್ತೇ ಬಿಡುವುದು, ನಾಯಿಗೆ ಅನ್ನಹಾಕುವ ತಟ್ಟೆಯನ್ನು ನೆಕ್ಕುವುದು, ಚೌರಮಾಡಿಸಿಕೊಳ್ಳದೆ ಓಡಾಡುವುದು, ರುಮಾಲನ್ನು ಹಿಂದು ಮುಂದಾಗಿರಿಸಿಕೊಂಡು ಸಿಟಿ ಬಸ್ ಹತ್ತುವುದು, ಇವೇ ನನ್ನ ಬೀದಿಯಲ್ಲಿ ವಾಸವಾಗಿರುವ ಗಂಡಂದಿರ ಸತ್ಯಾಗ್ರಹ ಪದ್ಧತಿಗಳು ಎಂದು ನಾನು ಅರಿತುಕೊಂಡೆ.


"ಮಹಿಳಾಮಣಿಯರಿಗೆ ಹೆದರಿಕೆ ಜಾಸ್ತಿ. ಅದರಲ್ಲೂ, ಗಂಡನ ಪ್ರಾಣದ ಮೇಲೆಯೇ ಅವರ ಪಂಚಪ್ರಾಣಗಳೂ ನಿಂತಿರುವುದು, ಸಾರ್", ಎಂದು ನನ ಗೊಬ್ಬರು ಹೇಳಿದರು. ಆದ್ದರಿಂದ, ಅವರೇನು ಮಾಡುತ್ತಾರೆ ಅಂದರೆ, ಹೆಂಡತಿ ತನ್ಮಮೇಲೆ ಕೋಪಿಸಿಕೊಂಡು ಉಗುರು ಹಲ್ಲು ತೋರಿಸುತ್ತಾ ಸಿಟ್ಟಿಗೆದ್ದರೆ, ತಕ್ಷಣವೇ 'ಜ್ವರ! ಜ್ವರ!' ಹೊಟ್ಟೆನೋವು! ಬೆನ್ನು ಉಳುಕಿತು! ಪಾರ್ಶ್ವವಾಯು!' ಎಂದು ಹಾಸಿಗೆ ಹಾಸಿ ಧೊಪ್ಪನೆ ಬೀಳುವರಂತೆ. ಆಕೆಯೋ ಡಾಕ್ಟರೋ ಯಾವ ಔಷಧಿ ಕೊಟ್ಟರೂ, ವಾಂತಿ ಮಾಡುವರಂತೆ ಇಂಜಕ್ಷನಿಗೇ ಅಂತ ಡಾಕ್ಟರು ಬಂದರೆ, ಆತನ ಕಿವಿಯಲ್ಲಿ "ಡಬ್ಬಲ್ ಚಾರ್ಜು ಮಾಡಿಕೊಡುತ್ತೇನೆ; ಸುಮ್ಮನೆ ಹಾಗನ್ನಿ ಸಾಕು, ಚುಚ್ಚಬೇಡಿ" ಎಂದುಹೇಳಿ ಬಚಾವಾಗುವರಂತೆ ಅವರ ಪಕ್ಕದ ಮನೆಯವರು ನನಗಿನ್ನೊಂದು ಉಪಾಯ ಹೇಳಿಕೊಟ್ಟರು. 'ಗ್ಯಾರಂಟಿ ತಂತ್ರ' ಇದು, ಎಂದರು ಅಯ್ಯೊ, ಅಪ್ಪ, ಉಶ್ ಎಂದು ತಲೆಯಮೇಲೆ ಕೈ ಇರಿಸಿ, ಕನ್ನಂಬಾಡಿ ಕಟ್ಟೆಯ

ಫೋಟೊ ಬಲಗೈಯಲ್ಲಿ, ಮಾರಿಕಣಿವೆ ಕೆರೆಯ ಫೋಟೊ ಎಡಗೈಯಲ್ಲಿ ಹಿಡಿದು, ನೆಲದಮೇಲೆ ಗೋಡೆಗೆ ಒರಗಿ ಕೂತುಕೊಳ್ಳಿ, ತಕ್ಷಣ ಎಂಥ ಹೆಂಡತಿಯಾದರೂ ದಾರಿಗೆ ಬರುತ್ತಾಳೆ, ಎಂದರು. ಮತ್ತೊಬ್ಬರು ಹೇಳಿದರು, ಛೆ! ಛೆ! ಅದು ಸಾಲದು! ನಾನು ಮಾಡುವ ಉಪಾಯವೇ ಸರಿ. ಹೆಂಡತಿ ನನ್ನ ಹತ್ತಿರ ಕೋಪಿಸಿಕೊಂಡಳು ಅಂದರೆ, ಸರಿ! ಅರ್ಧಗಂಟೆ ಟೈಂ ಕೊಡುತ್ತೇನೆ, ನಗುನಗುತ್ತಾ ಎದುರಿಗೆ ಬಾ ಅಂತ. ಬರಲಿಲ್ಲ? ಮನೆಯಮುಂದೆ ರಸ್ತೆ ಪಕ್ಕದಲ್ಲಿರುವ ಇಲೆಕ್ಟ್ರಿಕ್ ಕಂಬ ಹತ್ತುತ್ತೇನೆ ... ಎಂಟಡಿ ಏರುವುದರೊಳಗೆ, ಅಲ್ಲಿಗೇ ಓಡಿಬರುತ್ತಾಳೆ ಹ ಹ್ಹ ಹ ಹ್ಹ ಹ್ಹಾ ಎಂದು ಅಟ್ಟಹಾಸಮಾಡುತ್ತಾ, ಎಂದರು, ಅವರು.

ಸಿನಿಮ ನಲ್ಲಿ ಎರಡೂ ಇಲ್ಲದ ಊರಿಗೆ ವರ್ಗ ಕೇಳಿ ಅರ್ಜಿ ಬರೆಯುವುದು, ತಾಯಿಗೆ ಬೇಗ ಬರುವಂತೆ ಕಾಗದ ಬರೆದು ಆಕೆಯ ಕಣ್ಣಿಗೆ ಬೀಳುವಂತೆ ಮೇಜಿನ ಮೇಲಿಡುವುದು, ಜೀವವಿಮೆ ಏಜಂಟನ್ನು ಮನೆಗೆ ಕರೆಯಿಸುವುದು, ಹಗ್ಗ ಕೊಂಡು ಕೊಂಡಂತೆ ರುಜುವಾತು ಕೊಡುವ ಬಿಲ್ಲೊಂದನ್ನು ರೂಮಿನಲ್ಲಿ ಹಾರಾಡಿಸುವುದು, "ರೂಬಿ", "ಮ್ಯಾಗಿ" "ಪೆಗ್ಗಿ" ಎಂದೆಲ್ಲ ಗೋಡೆ ಮೇಲೆ ಬರೆಯುವುದು, ಇವೇ ಮುಂತಾದ ಉಪಾಯಗಳನ್ನೂ ನನಗೆ ಪಲವರು ಉಪದೇಶಿಸಿದರು. ಕೊನೆಯಮನೆ ಆಚಾರರು, "ಇಲ್ಲಿ ಬಾರೋ ಇಲ್ಲಿ! ನಾನೊಂದು ತಂತ್ರ ಹೇಳಿಕೊಡುತ್ತೇನೆ....ಪರಿ ಪ್ರಾಜಕೋಪನಿಷತ್ತು ಎಂಬ ಗ್ರಂಥಕ್ಕೆ ನಾನು ಟೀಕಾ ಬರೆದಿದೇನೆ. ಅದರ ಒಂದು ಪ್ರತಿ ಕೊಂಡು, ಮನೆಯಲ್ಲಿ ಪಾರಾಯಣಮಾಡು, ಅವಳೆದುರು ಜೀವನ ನಶ್ವರ, ನೀರಿನಮೇಲಿನ ಗುಳ್ಳೆ, ಎಂದು ಪಿಸುಗುಟ್ಟು. ಆಮೇಲೆ, ಮೂರನೆಯದಿನ ಕ್ಷೌರಕ ನನ್ನು ಮನೆಗೆ ಕರೆಯಿಸಿ, ವರಾಂಡಾದಲ್ಲಿ ಕೂತು, ಆಕೆಗೆ ಕೇಳುವಹಾಗೆ ಗಟ್ಟಿಯಾಗಿ, ಬೋಳಿಸೋ, ನುಣ್ಣಗೆ ಬೋಳಿಸೋ, ಎನ್ನು. ಬೇಡ, ಬೇಡ, ಅಂತ ಅಂಗಲಾಚಿ ಕೊಂಡು ಆಕೆ ಬಂದೇ ಬರುತ್ತಾಳೆ, ಕೋಪವೆಲ್ಲ ಹುದುಗಿಹೋಗುತ್ತದೆ, ಎಂದರು.

ದಾಂಪತ್ಯಜೀವನದ ಎಡರು ತೊಡರುಗಳಲ್ಲಿ ಅತಿ ಮುಖ್ಯವಾದ ಈ 'ಹೆಂಡತಿ ಜಗಳ'ಕ್ಕೆ ನನಗೆ ಪರಿಹಾರೋಪಾಯಗಳು ನೂರಾರು ದೊರೆಯಿತು ಅವುಗಳಲ್ಲಿ ಹಲವನ್ನು ಕೊರವಂಜಿಯ ವಾಚಕರಮುಂದೆ ಇರಿಸಿದ್ದೇನೆ. ಗಂಡಂದಿರ ಕೋಪವನ್ನು ಶಮನಮಾಡಲು ತಕ್ಕ ಉಪಾಯಗಳನ್ನು ಇದೇ ರೀತಿ ಸಂಶೋಧನೆ ನಡೆಯಿಸಿ, ಯಾರಾದರೂ ವಾಚಿಕೆಯರು ತಮ್ಮ ಸಹೋದರಿಯರಿಗೆ ತಿಳಿಸಿದರೆ, ಉತ್ತಮ; ಅಲ್ಲವೆ?

— ಪಾಟೂಳಿ.



ಸೂರ್ಯಾಸ್ತಮವಾದಾಗ
ದೀಪವು ಪ್ರಕಾಶಮಾನವಾಗಿ
ಬೆಳಗುತ್ತದೆ.

"ಅಸ್ತಮಿ"ಸುವ ವಯಸ್ಸಿನಲ್ಲಿ ಆದರದಿಂದ ನಿರೀಕ್ಷಿಸ
ಬಹುದಾದ ಸ್ಥಿರತೆ ಮತ್ತು ಅನುಕೂಲಗಳ
ಹೊಂಬೆಳಕು.

★

ಮೈಸೂರು ಸರ್ಕಾರದ ವಿಮಾ ಶಾಖೆ

ಸಾರ್ವಜನಿಕ ಭಾಗ

ಪ್ರಧಾನ ಕಛೇರಿ: ಟೆಲಿಫೋನ್ 2918. ಟೆಲಿಗ್ರಾಂ "ಇನ್ಸ್ಯೂರ್"

ವಿವರಗಳಿಗೆ:
ಕಾರ್ಯದರ್ಶಿ ಬೆಂಗಳೂರು ಅಥವಾ ಹತ್ತಿರ ಇರುವ
ಏಜಂಟರಿಗೆ ಬರೆಯಿರಿ.

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪು ನೆಪ್ಪುಗಳು ಕಡಿಮೆಯಾಗುವುವು. ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.


ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ೨

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩—೦—೦

ಬಿಡಿ ಪ್ರತಿ ಕೇವಲ ಆಣೆ ೦—೪—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.



ಒಳ್ಳೆ ಅದೃಷ್ಟ


ಮೀನಿನ ಮೂಳೆಯಿಂದ

ಅಮೇರಿಕಾದ ಟೆಕ್ಸಸ್‌ನಲ್ಲಿ ಜನರು ಮೀನಿನ ತಲೆಯ ಮೂಳೆಯೊಂದನ್ನು ಅದೃಷ್ಟಕ್ಕಾಗಿ ತಮ್ಮ ಹತ್ತಿರ ತಾಯಿತಿಯಂತೆ ಇರಿಸಿಕೊಳ್ಳುತ್ತಾರೆ. ತಾಯಿತಿಯು ಕಳೆದುಹೋದರೆ ಅದೃಷ್ಟ ಬರುತ್ತದಂತೆ.

ಎಲ್ಲವೂ ಅಂಧಮಯವಾದಾಗ, ಸಂಸಾರದಲ್ಲಿ ದುಡಿಯುವವನು ಮರಣ ಹೊಂದಿದಾಗ, ಮುಪ್ಪು ಬಂದು ಸಂಪಾದಿಸಲಾಗದೆ ಇದ್ದಾಗ, ವಿಮೆಯು ಅದೃಷ್ಟದ ತಾಯಿತಿಯಂತೆ ಅಪಾರ ಸಹಾಯವನ್ನು ಕೊಡುವುದು.

ಬಾಂಬೆ ಮ್ಯೂಚುಯಲ್ ವಿಮೆಯು ಮಾನವ ಜೀವನ ಮತ್ತು ಆಸೆಯನ್ನು ಅಂತಹ ವೇಳೆಗಳಲ್ಲಿ ತರುತ್ತದೆ.





ಎಂಡೋಮೆಂಟ್ ಅಶ್ಯೂರೆನ್ಸ್

ಹಣ ಶೇಖರಿಸಿಡಲು ಅತ್ಯುತ್ತಮ ಮಾರ್ಗ. ವಿಮಾದಾತನು ಅಲ್ಪಾಯುವಾದಲ್ಲಿ ಸಂಸಾರಕ್ಕೆ ರಕ್ಷಣೆ ಈಯುವುದು. ಹಿರಿಯ ವಯಸ್ಸಿನಲ್ಲಿ ಆತನಿಗೇ ಕೈನೆರವಾಗುತ್ತದೆ.

ಸ್ಥಾಪನೆ:
1871

ದಿ
ಬಾಂಬೆ ಮ್ಯೂಚುವಲ್
ಲೈಫ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್

ಬಾಂಬೆ ಮ್ಯೂಚುವಲ್ ಬಿಲ್ಡಿಂಗ್,
ದಾದಾಭಾಯ್ ನೌರೋಜಿ ರೋಡ್, ಬೊಂಬಾಯಿ
ಬೆಂಗಳೂರು ಬ್ರಾಂಚ್ ಕಛೇರಿ:—172/3, ನರಸಿಂಹರಾಜಾ ರಸ್ತೆ, ಬೆಂಗಳೂರು

EVERY POLICYHOLDER A SHAREHOLDER

REG No M 4718 KORAVANJI, FEBRUARY 1955

Printed by B. S Iyengar, Bangalore City

Publisher—B. N. Gupta. Editor—M. Sivaram.